ಸ್ತ್ರೀ ಸ್ವಗತ

JNANA001688

ಲೇಖಕರು : ಶ್ರೀ ಕುಮಾರ ಶಂಕರನಾರಾಯಣ



ಕರ್ನಾಟಕ ಯಕ್ಷಗಾನ ಅಕಾಡೆಮಿ
೨ನೇ ಮಹಡಿ ಚಾಲುಕು ವಿಭಾಗ, ಕನ್ನಡ ಭವನ,
ಜೆ.ಸಿ ರಸ್ತೆ, ಬೆಂಗಳೂರು ೫೬೦ ೦೦೨

ಸ್ತ್ರೀ ಸ್ವಗತ

# ಸ್ತ್ರೀ ಸ್ವಗತ

ಲೇಖಕರು:
ಶ್ರೀ ಕುಮಾರ ಶಂಕರನಾರಾಯಣ

ಕರ್ನಾಟಕ ಯಕ್ಷಗಾನ ಅಕಾಡೆಮಿ
2ನೇ ಮಹಡಿ ಚಾಲುಕು ವಿಭಾಗ, ಕನ್ನಡ ಭವನ,
ಜೆ.ಸಿ ರಸ್ತೆ, ಬೆಂಗಳೂರು 560 002

STHREE SWAGATHA written by Sri Kumara Shankaranarayana Published by Registrar Karnataka Yakshagana Academy, Kannada Bhavana, J.C Road, Bangalore - 560 002

Ph : 080 22113146

**ಈ ಆವೃತ್ತಿಯ ಹಕ್ಕು:** ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು – ೫೬೦ ೦೦೨

ಮುದ್ರಿತ ವರ್ಷ : ೨೦೧೯

ಪ್ರತಿಗಳು : ೩೦೦

ಪುಟಗಳು : ೪೦

ಬೆಲೆ : ರೂ.೫೦/–

ಪ್ರಧಾನ ಸಂಪಾದಕರು

**ಪ್ರೊ. ಎಂ ಎ ಹೆಗಡೆ**

**ಅಧ್ಯಕ್ಷರು,** ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

ಪ್ರಕಾಶಕರು :

**ಎಸ್. ಹೆಚ್ ಶಿವರುದ್ರಪ್ಪ**

**ರಿಜಿಸ್ಟ್ರಾರ್,** ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

ಲೇಖಕರು :

**ಶ್ರೀ ಕುಮಾರ ಶಂಕರನಾರಾಯಣ**

ಉಪನ್ಯಾಸಕರು, ಸರಕಾರಿ ಪದವಿಪೂರ್ವ ಕಾಲೇಜು, ಕೋಟೇಶ್ವರ

ಮೊ: ೯೪೪೯೬-೬೩೨೦೬

ಮುದ್ರಕರು :

**ಮಾತೃಶ್ರೀ ಗ್ರಾಫಿಕ್ಸ್**

ಟಿ. ಆರ್ ನಗರ್ , ಬೆಂಗಳೂರು ೫೬೦ ೦೨೮

ಮೊ : ೯೪೪೯೦-೦೦೧೫೫

## ಸ್ತ್ರೀಸ್ವಗತ – ಅಧ್ಯಕ್ಷರ ಮಾತು



ಯಕ್ಷಗಾನ ಸಾಹಿತ್ಯ ಎರಡು ವಿಧವಾದುದು: ಹಾಡುವ ಪದ್ಯ ಮತ್ತು ಆಡುವ ಗದ್ಯ. ಹಾಡುವ ಪದ್ಯವು ಲಿಖಿತವಾಗಿದ್ದರೆ ಆಡುವ ಗದ್ಯವು ಆಶುವಾಗಿರುತ್ತದೆ. ಆಶುವಾಗಿರುವುದು ಕವಿಯಿಂದ ಲಿಖಿತವಾದುದಲ್ಲ ಎಂದಷ್ಟೇ ಹೇಳಬಹುದೇ ಹೊರತು ಅದು ಬರೆಯಲ್ಪಡುವಂಥದೇ ಅಲ್ಲವೆಂದು ತಿಳಿಯಬಾರದು. ಕೆಲವೊಮ್ಮೆ ಕವಿಯ ಪದ್ಯಗಳಿಗೆ ಅರ್ಥವನ್ನು ಬರೆದು ಪ್ರಕಟಿಸಿರುವುದೂ ಇದೆ. ಮೂಡಲಪಾಯದಂಥಲ್ಲಿ ಬರೆದುಕೊಟ್ಟುದನ್ನೇ ಆಡುವುದು ರೂಢಿ. ಅದು ಕೂಡ ಕವಿಯೇ ಬರೆದುದಾಗಿರದೆ ಇನ್ನಾರೋ ಬರೆದುದಾಗಿರುತ್ತದೆ. ಯಕ್ಷಗಾನದಲ್ಲಿ ಕೆಲವರು ಪಾತ್ರವೊಂದರ ಮಾತುಗಳನ್ನು ತಾವೇ ಬರೆದುಕೊಳ್ಳುವುದೂ ಉಂಟು. ವೃತ್ತಿಮೇಳಗಳಲ್ಲಿ ಪಾತ್ರದ ಸಂಭಾಷಣೆಯೇ ಮುಂತಾದವು ಬರೆದಿಟ್ಟ ಹಾಗೆ ಸಾಗುತ್ತದೆ. ಪ್ರತಿಯೊಂದು ಆಟಕ್ಕೂ ಬೇರೆಯಾಗುವುದಿಲ್ಲ. ಪ್ರದರ್ಶನದ ಶಿಸ್ತುಬದ್ಧತೆಗೆ ಅದು ಅವಶ್ಯವೂ ಆಗಿರುತ್ತದೆ.

ಈ ಆಡುಗದ್ಯದಲ್ಲಿ ವಿಶಿಷ್ಟವಾದುದು ಪೀಠಿಕೆ. ಇದು ಸ್ವಗತರೂಪದ್ದು. ಯಕ್ಷಗಾನದಲ್ಲಿ ಸ್ವಗತವನ್ನು ಕೂಡ ಭಾಗವತನ ಜೊತೆಯಲ್ಲಿ ಸಂಭಾಷಿಸುವಂತೆ ನರೂಪಿಸುವುದುಂಟು. ಪೀಠಿಕೆಯನ್ನು ಹೀಗೆಯೇ ಹೇಳಬೇಕೆಂಬ ನಿರ್ಬಂಧವನ್ನು ವಿಧಿಸಿಲ್ಲವಾದರೂ ಅದು ಕಥೆಗೆ ವಿರುದ್ಧವಾಗಿರಬಾರದು. ಪಾತ್ರ ಸ್ಥಾಪನೆಗೆ ಅನುಕೂಲಿಸುವಂತಿರಬೇಕು ಎಂಬುದು ಸಾಮಾನ್ಯ ನಿಯಮ. ಅದನ್ನು ಯಾವ ರೀತಿಯಲ್ಲಿ ಹೇಳಬೇಕೆಂಬುದನ್ನು ಆಯಾ ಪಾತ್ರಧಾರಿಗೆ ಬಿಟ್ಟಿದ್ದು. ಕಲಾವಿದನ ಪಾಂಡಿತ್ಯ ಪ್ರತಿಭೆಗಳು ಮಹತ್ವದವಾಗುತ್ತವೆ. ಅದದು ಪ್ರತ್ಯೇಕವಾದ ಅಧ್ಯಯನಕ್ಕೆ ಅರ್ಹವಾಗಿದೆ.

ಪ್ರಸ್ತುತ ಕೃತಿಯಲ್ಲಿ ಇರುವ ಸ್ವಗತಗಳು ಸ್ತ್ರೀಪಾತ್ರಗಳವು. ಪ್ರಸಿದ್ಧ ಸ್ತ್ರೀವೇಷಧಾರಿಗಳಾದ ಎಂ.ಎ.ನಾಯ್ಕರ ಕೆಲವು ಪಾತ್ರಗಳ ಸ್ವಗತಭಾಗವನ್ನು ಇಲ್ಲಿ ಕುಮಾರ ಶಂಕರನಾರಾಯಣರು ಸಂಗ್ರಹಿಸಿ ಕೊಟ್ಟಿದ್ದಾರೆ. ಅವರ ಬಳಿ ಕುಳಿತು ಮಾತುಗಳನ್ನು ಹೇಳಿಸಿ ಕೃತಿರೂಪದಲ್ಲಿ ಕೊಟ್ಟಿದ್ದಾರೆ. ಇದು ಕಲಾವಿದರಿಗೂ ಕಲೆಯ ಅಧ್ಯಯನಕ್ಕೆ ತೊಡಗಿದವರಿಗೂ ಉಪಯುಕ್ತಗಳಾಗಿವೆ. ಇದೊಂದು ಅಪರೂಪದ ಕೃತಿಯಾಗಿದೆ.

ಈ ಕೃತಿಯನ್ನು ಪ್ರಕಟಿಸಲು ಅಕಾಡೆಮಿಗೆ ಒಪ್ಪಿಸಿದ ಕುಮಾರ ಶಂಕರನಾರಾಯಣ ಅವರಿಗೂ ಪರಿಶೀಲಿಸಿಕೊಟ್ಟ ಅಕಾಡೆಮಿಯ ಸದಸ್ಯರಾದ ಲಕ್ಷ್ಮೀನಾರಾಯಣ ಕಾಶಿಯವರಿಗೂ ಆಡಳಿತಾಧಿಕಾರಿ ಎಸ್.ಎಚ್.ಶಿವರುದ್ರಪ್ಪ ಹಾಗೂ ಸಿಬ್ಬಂದಿವರ್ಗಕ್ಕೂ ಅಂದವಾಗಿ ಮುದ್ರಿಸಿದ ಮಾತೃಶ್ರೀ ಮುದ್ರಣಾಲಯದವರಿಗೂ ಅಭಿನಂದನೆಗಳು.

**ಪ್ರೊ.ಎಂ.ಎ.ಹೆಗಡೆ**

ಅಧ್ಯಕ್ಷರು

# ಪರಿವಿಡಿ

1. ಸ್ತ್ರೀಸ್ವಗತ – ಅಧ್ಯಕ್ಷರ ಮಾತು .......... 3
2. ತೊಡಗಿದೆನೇಕೆ? .......... 7
3. ದಕ್ಷಯಜ್ಞ – "ದಾಕ್ಷಾಯಿಣಿ" .......... 14
4. ಲಂಕಾದಹನ – ಸೀತೆ .......... 15
5. ಭೀಷ್ಮ ಪ್ರತಿಜ್ಞೆ – ಯೋಜನಗಂಧಿ .......... 18
6. ಭೀಷ್ಮ ವಿಜಯ – ಅಂಬೆ .......... 20
7. ಕೀಚಕ ವಧೆ ಸೈರಂಧ್ರಿ .......... 23
8. ರತಿ ಕಲ್ಯಾಣ – ದ್ರೌಪದಿ .......... 27
9. ಸುಧನ್ವ. – ಪ್ರಭಾವತಿ .......... 29
10. ಭಸ್ಮಾಸುರ – ಮೋಹಿನಿ. .......... 30
11. ರಾಣಿ ಶಶಿಪ್ರಭೆ .......... 31
12. "ಚಂದ್ರಾವಳಿ" ವಿಲಾಸ. .......... 34
13. "ವೃತ್ತಿ ಬದುಕಿನ ಹಿನ್ನೋಟ" .......... 37

## ಮುನ್ನುಡಿ

ಗೀತ, ವಾದನ, ನರ್ತನ, ಆಹಾರ್ಯ್ಯ, ಮತ್ತು ವಾಚಿಕವೆಂಬ ಅವಯವಗಳಿಂದ ಕೂಡಿದ ಕಲೆ ಯಕ್ಷಗಾನ. ಆಶುವಚನ, ಯಕ್ಷಗಾನದ ವೈಶಿಷ್ಟ್ಯ. ವೇಷಧಾರಿ ಕಲಾವಿದ ಮಾತಿನ ಮೂಲಕ ದೃಶ್ಯ ಕಟ್ಟುವ ಅವಕಾಶ ಹೊಂದಿರುತ್ತಾನೆ. ಈ ಬಗ್ಗೆ ಕಲಾವಿದನಲ್ಲಿ ಭಾಷೆಯ ಮೇಲೆ ಹಿಡಿತ, ಸಾಹಿತ್ಯದ ಉತ್ತಮ ಪರಿಜ್ಞಾನ ಹಾಗೂ ಮಾಧ್ಯಮದ ಕುರಿತಾದ ಸಮಗ್ರ ಅರಿವು ಇರಬೇಕಾಗುತ್ತದೆ. ಆದರೆ ಮಾತಿನಲ್ಲಿ ದೃಶ್ಯ ಕಟ್ಟುವ ಹೆಚ್ಚು ಅವಕಾಶ ಇರುವುದು ಸ್ವಗತದಲ್ಲಿ ಮಾತ್ರ. ಸ್ತ್ರೀ ವೇಷಗಳಿಗೆ ಲಭಿಸುವ ಈ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡ ಸ್ತ್ರೀ ವೇಷಧಾರಿಗಳಲ್ಲಿ ಶ್ರೀ ಎಮ್.ಎ ನಾಯ್ಕ್‌ರವರೂ ಒಬ್ಬರು. ನಾನೂ ಅವರ ಶಶಿಪ್ರಭೆ, ದ್ರೌಪದಿ,ಸುಭದ್ರೆ ಮುಂತಾದ ವೇಷಗಳನ್ನು ಕಂಡಿದ್ದೇನೆ. ಮಾತಿನಲ್ಲಿ ನಿರರ್ಗಳತೆ ಇರುವುದಾದರೂ ಅತಿ ವೇಗವೂ ಅಥವಾ ಅತಿ ನಿಧಾನವೂ ಆಗಿರದ ರೀತಿ ಪ್ರೇಕ್ಷಕರನ್ನು ತಕ್ಷಣ ಸೆಳೆಯಬಲ್ಲುದು.

ಲೇಖಕರು, ಎಮ್.ಎ ನಾಯ್ಕ್‌ರವರ ಹತ್ತು ಪ್ರಮುಖ ಸ್ತ್ರೀ ವೇಷಗಳ ಸ್ವಗತ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿದ್ದಾರೆ. ಇದೊಂದು ಸಾಹಸದ ಕೆಲಸವೇ. ಯಾಕೆಂದರೆ ಎಮ್.ಎ ನಾಯ್ಕ್‌ರವರು ಈಗ ವಿಶ್ರಾಂತಿ ಜೀವನವನ್ನು ಸಾಗಿಸುತ್ತಿದ್ದಾರೆ. ದೀರ್ಘಕಾಲ ವೇಷಮಾಡುವುದರಿಂದ ದೂರ ಉಳಿದರೆ ಒಟ್ಟು ಕಲ್ಪನೆ ಮಾತ್ರ ಉಳಿದೀತೇ ಹೊರತು ಸಮಗ್ರ ಚಿತ್ರಣ ಉಳಿಯುವ ಸಾಧ್ಯತೆ ಕಡಿಮೆ. ಮುಖ್ಯವಾಗಿ ಭಾಷೆ. ಶಬ್ಧ ಜೋಡಣೆ, ಪ್ರಾಸ, ಅಲಂಕಾರಗಳು ವೃತ್ತಿ ನಿರತರಾಗಿದ್ದ ಕಾಲದಲ್ಲಿ ಲೀಲಾಜಾಲವಾಗಿ ಪ್ರವಹಿಸಿದ ಹಾಗೆ ಹೊರಬರಲಾರದು. ಆದರೆ ಲೇಖಕ ಶ್ರೀ ಕುಮಾರ್‌ರವರು ಕೆದಕಿ, ಬಾಯಿಗೆ ಕೈಹಾಕಿ ಎಮ್.ಎ ನಾಯ್ಕ್‌ರ ಹೃದಯಾಂತರಾಳದಲ್ಲಿ ಸುಪ್ತವಾಗಿದ್ದ ಸನ್ನಿವೇಶ ಹಾಗೂ ಶಬ್ಧಗಳಿಗೆ ಚಾಲನೆಕೊಡುವ ಮೂಲಕ ಈಗ ವಿಷಯ ಮಂಡನೆ ಮಾಡಿದಂತೆ ಭಾಸವಾಗುವ ರೀತಿಯಲ್ಲಿ ಸಂಗ್ರಹಿಸಿದ್ದಾರೆ. ಕೆಲವೊಂದು ಇಲ್ಲಿ ಉಲ್ಲೇಖನೀಯ.

ಚಂದ್ರಾವಳಿ–ತಾನು ಏಕಾಂಗಿಯಾಗಿ ಹೊರಗೆ ಹೋಗುವುದನ್ನು ಆಕ್ಷೇಪಿಸುವ ತಾಯಿಯ ಮನದೊಳಗೆ ಹುದುಗಿದ್ದ ಆತಂಕಕ್ಕೆ ಕಾರಣವಾದ ಕೃಷ್ಣನ ಉಪಟಳವನ್ನು ಅರಿತು ಧೈರ್ಯ ತುಂಬುವ ರೀತಿ ಬಹಳ ಚಾಣಾಕ್ಷತನದ ಉದಾಹರಣೆ.

ರತಿ–ಕಲ್ಯಾಣ, ದ್ರೌಪದಿ–ಮನ್ಮಥನಿಗೆ ಎಂಟು ದಿನದೊಳಗೆ ಮದುವೆ ಮಾಡಿಸದಿದ್ದಲ್ಲಿ ಹದಿನಾರು ಸಾವಿರ ಮಡದಿಯರೊಂದಿಗೆ ನಿಮ್ಮನ್ನು ಬಿಟ್ಟು ದೂರ ಉಳಿಯುತ್ತೇನೆ ಎಂದು ರುಕ್ಮಿಣಿ ಹೇಳಿದಳಂತೆ .ಏನು ಸೊಕ್ಕು? ಅರಮನೆ ಬಿಟ್ಟು ಹೊರಟವರಿಗೆ ಪ್ರತ್ಯೇಕ ಮನೆಬೇಡವೆ! ಎಲ್ಲಿದೆ? ಎಂದು ತನ್ನೊಳಗೆ ತಾನು ಪ್ರಶ್ನಿಸುವ ಮಾತಿನಲ್ಲಿ ಲೋಕವ್ಯವಸ್ಥೆಯ ಪರಿಯು ಅಡಕವಾಗಿದೆ.


ಅಂಬೆ– “ಮರುಳೆನಾನಾಗಿರ್ಪೆ” ▯ ಎಂದು ತನ್ನ ವಿಧಿಯನ್ನು ತಾನೇ ಹಳಿದುಕೊಳ್ಳುವ

ರೀತಿ ಮನ ಕಲಕುವಂತದ್ದು. ತನ್ನೊಳಗಿನ ತರ್ಕದ ಅಂತ್ಯದಲ್ಲಿ ಇಷ್ಟಕ್ಕೆಲ್ಲ ಕಾರಣನೇ ಆ ಭೀಷ್ಮ ಎಂಬ ತೀರ್ಮಾನಕ್ಕೆ ಬರುವ ರೀತಿ ಕೂಡ ಹೃದಯಸ್ಪರ್ಶಿ.

ಪುಸ್ತಕದಲ್ಲಿರುವ ಈ ಸಂಗ್ರಹಗಳು ಈ ಕಾಲಕ್ಕೆ ತುಂಬ ಪ್ರಸ್ತುತ. ಕಾರಣವೇನೆಂದರೆ ಯಕ್ಷಗಾನದಲ್ಲಿ ಈಗ ಪೌರಣಿಕ ಕಥಾನಕಗಳ ಪ್ರದರ್ಶನ ಕಡಿಮೆಯಾಗುತ್ತಿದೆ. ನಡುವೆ ಅಲ್ಲೊ ಇಲ್ಲೊ ಇಂತಹ ಪ್ರಸಂಗಗಳ ಪ್ರದರ್ಶನದಲ್ಲಿ ಈಗಿನ ವೇಷಧಾರಿಗಳು ತಮ್ಮ ನಿರ್ವಹಣೆಯನ್ನು ಉತ್ತಮಪಡಿಸಲು ಈ ಪುಸ್ತಕ ತುಂಬ ಉಪಯುಕ್ತವಾದೀತು. ವಾಚಿಕದ ಗುಣಮಟ್ಟ ಉತ್ತಮ ಪಡಿಸಬೇಕಾದ ಈ ಕಾಲಘಟ್ಟದಲ್ಲಿ ಈ ಪುಸ್ತಕ ಉಪಯುಕ್ತವಾಗುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ

ಬೇಳೂರು ರಾಘವ ಶೆಟ್ಟಿ
"ಕೃಷ್ಣದೇವ" ಚಿತ್ರಪಾಡಿ
ಅಂಚೆ ಸಾಲಿಗ್ರಾಮ :576225.
ಉಡುಪಿ ಜಿಲ್ಲೆ.

## ತೊಡಗಿದೆನೇಕೆ?



ಕಳೆದ ಶತಮಾನದ ಉತ್ತರಾರ್ಧ, ನಡುತಿಟ್ಟಿನ ಯಕ್ಷಗಾನದ ಮಟ್ಟಿಗೆ ಸುವರ್ಣ ಕಾಲ. ಹಾರಾಡಿ, ಮಟಪಾಡಿ ತಿಟ್ಟಿನ ದಿಗ್ಗಜಗಳು, ಶಿರಿಯಾರ ಮಂಜು ನಾಯ್ಕರು, ಮೊಳಹಳ್ಳಿ ಹೆರಿಯ ನಾಯ್ಕರು, ಸಕ್ಕಟ್ಟು ಲಕ್ಷ್ಮಿನಾರಾಯಣ, ಬೇಲ್ತೂರು ರಮೇಶ, ನೀಲಾವರ ಮಹಾಬಲ ಶೆಟ್ಟಿ ಹೀಗೆ ಧೀಮಂತ, ಶ್ರೀಮಂತ ಕಲಾವಿದರು ರಂಗಸ್ಥಳವನ್ನಾಳುತ್ತಿದ್ದ ಕಾಲವದು. ಅದರಲ್ಲೂ ಸ್ತ್ರೀ ವೇಷದ ಭೂಮಿಕೆಯಲ್ಲಿ ಅದ್ಭುತ ನಿರ್ವಹಣೆ ತೋರಿದ ಅನೇಕರು ಆ ಸಂದರ್ಭಕ್ಕೆ ರಂಗದಲ್ಲಿದ್ದರು. ಕೋಟ ವೈಕುಂಠ, ಹೆರಂಜಾಲು ವೆಂಕಟರಮಣ, ಅರಾಟೆ ಮಂಜುನಾಥ, ಬ್ರಹ್ಮಾವರ ರಾಮ ನಾಯಿರಿ. ದಯಾನಂದ ನಾಗೂರು ಮುಂತಾದವರು ಮುನ್ನೆಲೆಯಲ್ಲಿದ್ದರು, ರಂಗವನ್ನು ಶ್ರೀಮಂತಗೊಳಿಸಿದ್ದರು. ಆ ಕಾಲದಲ್ಲಿನ ಮತ್ತೊಬ್ಬ ಪ್ರಸಿದ್ಧ ಸ್ತ್ರೀ ವೇಷಧಾರಿ ಶ್ರೀ ಎಂ.ಎ.ನಾಯ್ಕರವರು. ಸ್ತ್ರೀವೇಷಕ್ಕೆ ತಕ್ಕುದಾದ ಶರೀರ, ಶಾರೀರ, ಸ್ವರದ ಏರಿಳಿತ, ಒನಪು-ವೈಯಾರ ಮುಂತಾದ ವಿಷಯಗಳಲ್ಲಿ ದೈವದತ್ತವಾದ ಶ್ರೀಮಂತಿಕೆ ಪಡೆದವರು ಇವರು. ಇತರ ಸಮಕಾಲೀನರಿಗಿಂತ ಇವರು ತುಸು ಭಿನ್ನವಾಗಿ ಎತ್ತರದಲ್ಲಿ ನಿಲ್ಲುವುದು ಅವರ ಅಧ್ಯಯನ, ಚಿಂತನೆಗಳ ಫಲವಾಗಿ ಹೊರಹೊಮ್ಮುವ ಪ್ರಬುದ್ಧ ಅರ್ಥಗಾರಿಕೆಯ ಶ್ರೀಮಂತಿಕೆಯಿಂದ. ಸ್ತ್ರೀವೇಷಗಳಿಗೆ ಪ್ರಮುಖ ಮತ್ತು ಪ್ರಾಥಮಿಕ ಅವಶ್ಯಕತೆಯಾದ ಭಾವನಾತ್ಮಕ ಪ್ರಸ್ತುತಿಯೊಂದಿಗೆ ವಿಷಯದ ಬಲಿಷ್ಠ ಹಂದರವನ್ನು ಹೊಂದಿದ್ದ ಅರ್ಥಗಾರಿಕೆ ಇವರ ಅನನ್ಯತೆ. ಪ್ರಜ್ಞಾವಂತರ ಧೀಶಕ್ತಿಗೆ ಪಂಥಾಹ್ವಾನ, ಯೋಚಿಸಿ ಜೀರ್ಣಿಸಿಕೊಳ್ಳಬೇಕಾದಷ್ಟು ಗಟ್ಟಿ ಇವರ ವಿಷಯ ಮಂಡನೆ.

ಸುಮಾರು ಹತ್ತು ವರ್ಷಗಳ ಹಿಂದೆ ಶಂಕರನಾರಾಯಣದ ತಲ್ಲೂರುಮಕ್ಕಿ ಎಂಬಲ್ಲಿ ಒಂದು ಕೂಡಾಟ. ಮಂದರ್ತಿ ಮತ್ತು ಹಾಲಾಡಿ ಮೇಳಗಳು. ಪ್ರಸಂಗ ಕೀಚಕವಧೆ-ಸುಧನ್ವ ಕಾಳಗ. ಬೇಗಾರು ಪದ್ಮನಾಭರ ಕೀಚಕ. ಎಂ.ಎ ನಾಯ್ಕರ ಸೈರೆಂಧ್ರಿ. ತುಂಬಿದ ಸಭೆ. ಸೈರೆಂಧ್ರಿಯ ಪ್ರವೇಶದ ಹೊತ್ತಿಗೆ ಸಭೆಯಲ್ಲಿ ತುಂಬಾ ಸದ್ದು ಗದ್ದಲ-ಗೊಂದಲ. ಆದರೆ ರಂಗದಲ್ಲಿ ತುಂಬು ಗಾಂಭೀರ್ಯ. ರಂಗ ಪ್ರವೇಶಿಸಿದ ಸೈರೆಂಧ್ರಿ ನಡುವೆ ನಿಂತು ಮಾತಿಗೆ ತೊಡಗುತ್ತಿದ್ದಂತೆ ಸಭೆಯಲ್ಲಿ ಮೌನವಾವರಿಸಲಾರಂಭಿಸಿತು. ಶ್ರುತಿಬದ್ಧ, ಆಕರ್ಷಕ ಸ್ವರದಲ್ಲಿ ಅರ್ಥಗರ್ಭಿತ ಸರಳ ಶಬ್ದಗಳಲ್ಲಿ ಪಾಂಡವರ ಯಾತನಾಮಯ ಜೀವನದ ವಿವಿಧ ಘಟನೆಗಳನ್ನು ವಿವರಿಸುತ್ತಾ ಹೋದಂತೆ ಸಭೆಯಲ್ಲಿ ಗಾಢ-ಗಂಭೀರ ಮೌನವಾವರಿಸಿತು. ಸಭೆಯನ್ನು ಸೈರೆಂಧ್ರಿ ಆವರಿಸಿಕೊಂಡಳು. ಆ ಪ್ರಬುದ್ಧ, ಪರಿಪೂರ್ಣ ಅರ್ಥಗಾರಿಕೆಯ ಸೊಬಗು ಸಭೆಯಲ್ಲಿ ಕುಳಿತ ನನ್ನನ್ನು ಸೆರೆಹಿಡಿಯಿತು. ಆಗ ವೈಯಕ್ತಿಕವಾಗಿ ಎಂ.ಎ.ನಾಯ್ಕರ ಪರಿಚಯ ನನಗಿದ್ದರೂ ಅವರಿಗೆ ನನ್ನ ಪರಿಚಯವಿರಲಿಲ್ಲ. ಆದರೂ ಅಂದು ನಾ ಗೈದ ಸಂಕಲ್ಪ, "ಈ ಅರ್ಥಗಾರಿಕೆಯ ದಾಖಲೀಕರಣವಾಗಬೇಕು". ಯಾಕೆಂದರೆ ಆ ಹೊತ್ತಿಗೆ ಎಷ್ಟೋ ಜನರ

ಸ್ತ್ರೀವೇಷ ಕಂಡಿದ್ದರೂ ಇಷ್ಟು ಪ್ರಬುದ್ಧ, ಪರಿಣಾಮಕಾರಿ, ಭಾವನಾತ್ಮಕ ಅರ್ಥಗಾರಿಕೆಯನ್ನು ನಾ ಕಂಡಿರಲಿಲ್ಲ, ಕೇಳಿರಲಿಲ್ಲ. ಎಂ.ಎ.ನಾಯ್ಕರ ಅರ್ಥಗಾರಿಕೆ ಅಷ್ಟು ಉತ್ಕೃಷ್ಟವಾದುದು. ಅವರು ತಿರುಗಾಟ ನಿಲ್ಲಿಸಿದರೆ ಮತ್ತೊಬ್ಬರಿಂದ ಆ ಮಟ್ಟವನ್ನು ನಿರೀಕ್ಷಿಸುವುದಕ್ಕಿಲ್ಲ. ಆ ಮಟ್ಟಿಗೆ ಅವರಿಗೆ ಅವರೇ ಸಾಟಿ. ಹಾಗಾದರೆ ಮತ್ತೆಲ್ಲಿಂದ ನಮಗೆ ಆನಂದದ ಅನುಭೂತಿ? ಹಾಗಾಗಿ ದಾಖಲೀಕರಣ ಮಾಡಿಕೊಳ್ಳಬೇಕೆನಿಸಿತು. ಅದಕ್ಕೆ ಈ ಸಾಲಿನಲ್ಲಿ ಕಾಲ ಕೂಡಿ ಬಂತು. ಈಗಾಗಲೆ ಎಂ.ಎ.ನಾಯ್ಕರು, ಮೇಳದ ತಿರುಗಾಟ ನಿಲ್ಲಿಸಿ ಮನೆಯಲ್ಲಿ ತುಸು ಕೃಷಿ ಕಾಯಕದೊಂದಿಗೆ ವಿಶ್ರಾಂತಿಯ ಜೀವನ ನಡೆಸಲಾರಂಭಿಸಿ ಆರೆಂಟು ವರ್ಷಗಳು ಸಂದಿವೆ. ಒಂದು ರೀತಿಯ ವಾನಪ್ರಸ್ಥ ಅವರದೀಗ. ಅವರ ಮನೆಗೆ ತೆರಳಿ ಹೀಗೊಂದು ಪುಸ್ತಕ ಸಿದ್ದಪಡಿಸುವ ಇಚ್ಛೆ ವ್ಯಕ್ತಪಡಿಸಿದಾಗ ಸಂತೋಷದಿಂದ ಸಮ್ಮತಿ ಸೂಚಿಸಿದರು. ನಾಲ್ಕಾರು ಬಾರಿ ಅವರ ಮನೆಗೆ ಭೇಟಿ ಕೊಟ್ಟಾಗ ಆತ್ಮೀಯತೆಯಿಂದ ಸ್ವಾಗತಿಸಿ ಹೃದಯ ವೈಶಾಲ್ಯತೆ ಮೆರೆದರು. ಸುಮಾರು ಹತ್ತಕ್ಕೂ ಹೆಚ್ಚು ಪಾತ್ರಗಳ ಪೀಠಿಕೆಯನ್ನು ನೆನಪು ಮಾಡಿಕೊಳ್ಳುತ್ತಾ ವಿವರಿಸಿದರು. ನಾ ಬರೆದುಕೊಂಡೆ. ಸ್ತ್ರೀ ವೇಷಕ್ಕೆ ಸಿದ್ದರಾಗುವವರಿಗೆ ಇದೊಂದು ಉತ್ತಮ ಆಕರ ಗ್ರಂಥವೇ ಹೌದು. ಆಶ್ಚರ್ಯವಾಯಿತು, ಅವರ ನೆನಪಿನ ಶಕ್ತಿಯನ್ನು ಕಂಡು. ರಂಗ ಕಸುಬು ತೊರೆದು ಸುಮಾರು ಹತ್ತು ವರ್ಷಗಳೇ ಸಂದು ಹೋದರೂ, ಆ ವಿಷಯಗಳು, ವಾಕ್ಯಗಳು ಒಂದಿನಿತೂ ಅವರ ಸ್ಮೃತಿಪಟಲದಿಂದ ವಿಚಲಿತಗೊಂಡಿಲ್ಲ. ನನ್ನ ಆಶ್ಚರ್ಯ ಕಂಡು ಅದರ ಗುಟ್ಟನ್ನರುಹಿದರು, "ನಾ ಬಹಳ ಪರಿಶ್ರಮಪಟ್ಟು ಸಿದ್ಧಪಡಿಸಿಟ್ಟುಕೊಂಡ ಸಂಪತ್ತದು. ವಿಷಯ ಸಂಗ್ರಹಕ್ಕಾಗಿ ಹಲವು ಪುಸ್ತಕಗಳನ್ನೋದಿದ್ದೇನೆ. ಅದಕ್ಕಿಂತ ಹೆಚ್ಚು ಮನದಲ್ಲಿ ಚಿಂತನೆ ನಡೆಸಿದ್ದೇನೆ. ಸ್ವಂತ ಪರಿಶ್ರಮದ ಪ್ರತಿಫಲವಾಗಿ ಕಟ್ಟಿಕೊಂಡ ಸಾಹಿತ್ಯ ಸಂಚಯವದು. ಹಾಗಾಗಿ ಮರೆತಿಲ್ಲ". ಒಬ್ಬ ಯಶಸ್ವಿ ಕಲಾವಿದ ರೂಪುಗೊಳ್ಳುವುದೇ ಸ್ವಂತ ಕೃಷಿಯ ಆಧಾರದಲ್ಲಿ, ಚಿಂತನಶೀಲತೆ ಅವನ ಯಶಸ್ಸಿನ ಗುಟ್ಟು. ರಂಗ ಪ್ರವೇಶಿಸುವವರು ಅರಿಯಬೇಕಾದ ವಿಚಾರವಿದು.

ಈ ಪುಸ್ತಕ ಇತರರಿಗೆ ಎಷ್ಟು ಪ್ರಯೋಜನಕಾರಿಯೂ ನಾ ಹೇಳಲಾರೆ. ಆದರೆ ಸಾಹಿತ್ಯ ಸಂಗ್ರಹದ ಅಭಿರುಚಿಯುಳ್ಳ ನನಗಂತೂ ವಿಶೇಷ ಸಂತೃಪ್ತಿಯನ್ನು ತಂದಿತ್ತಿದೆ. ನನ್ನ ಶ್ರಮ ಸಾರ್ಥಕ ಅನ್ನಿಸುತ್ತದೆ.

ಸುಮಾರು ಹತ್ತು ಪ್ರಮುಖ ಸ್ತ್ರೀ ವೇಷಗಳ ಪೀಠಿಕೆ ಈ ಪುಸ್ತಕ ಸ್ತ್ರೀ ಸ್ವಗತ ಪುಸ್ತಕದ ಹೂರಣ. ಜೊತೆಯಲ್ಲಿ ಎಂ.ಎ.ನಾಯ್ಕರ ಜೀವನ ಚರಿತ್ರೆಯ ಸಂಗ್ರಹವೂ ಇದರಲ್ಲಿದೆ. ಆಸಕ್ತರು ಕೊಂಡು ಓದಿದಲ್ಲಿ ನನ್ನ ಶ್ರಮಕ್ಕೆ ಪ್ರತಿಫಲ ದೊರೆಕಿದಂತೆ.

ಭವದೀಯ...

**ಕುಮಾರ ಶಂಕರನಾರಾಯಣ.** ಉಪನ್ಯಾಸಕರು
ಸರಕಾರಿ ಪದವಿಪೂರ್ವ ಕಾಲೇಜು
ಕೋಟೇಶ್ವರ:576222,
ಮೊಬೈಲ್ : 94663206

## ಇವರು ನಮ್ಮ ಹೆಮ್ಮೆಯ ಎಂ.ಎ. ನಾಯ್ಕರು



ಎಂ.ಎ.ನಾಯ್ಕರ ಪೂರ್ಣ ಹೆಸರು ಮಂದರ್ತಿ ಅಣ್ಣಪ್ಪ ನಾಯ್ಕ. ಅಣ್ಣಪ್ಪ ನಾಯಕರು ಎಂ.ಎ.ನಾಯ್ಕರಾದುದು ಒಂದು ಬದಲಾವಣೆಯ ಕಾಲಘಟ್ಟದಲ್ಲಿ. ಪಿ. ಶ್ರೀಧರ ಹಂದೆಯವರ ಯಜಮಾನಿಕೆಯ ಶ್ರೀ ಅಮೃತೇಶ್ವರಿ ಮೇಳದಲ್ಲಿ ಕೋಟ ವೈಕುಂಠರೊಂದಿಗೆ ಒತ್ತು ಸ್ತ್ರೀವೇಷ ಮಾಡುತ್ತಿದ್ದ ಕಾಲವದು. ನಾಲ್ಕಾರು ವರ್ಷಗಳ ಬಳಿಕ ಕೋಟ ವೈಕುಂಠರು ಆ ಮೇಳ ತೊರೆದರು.

ಯಜಮಾನರಿಗೆ ಆ ಸ್ಥಾನಕ್ಕೆ ಬೇರೆ ಸಮರ್ಥರನ್ನು ಅರಸಬೇಕಾದ ಅಗತ್ಯವಿರಲಿಲ್ಲ. ಒತ್ತು ಸ್ತ್ರೀ ವೇಷದವರಿಗೆ ಭಢ್ತಿ ನೀಡಿ ಪ್ರಧಾನ ಸ್ತ್ರೀ ವೇಷದ ಸ್ಥಾನದಲ್ಲಿ ಕೂರಿಸಿದರು. ಸ್ಥಾನಕ್ಕೆ ಸಮರ್ಥ ಜನವಾಯಿತು. ಆದರೆ ಹಣ ತೆತ್ತು ಬರುವ ಪ್ರೇಕ್ಷಕರು ಇದುವರೆಗೆ ಒತ್ತು ಸ್ತ್ರೀ ವೇಷದ ಅಣ್ಣಪ್ಪನನ್ನು ಅಷ್ಟು ಸುಲಭದಲ್ಲಿ ಸ್ವೀಕರಿಸುತ್ತಾರೆಂಬ ಭರವಸೆ ಇರಲಿಲ್ಲ. ವ್ಯಕ್ತಿ ಮೊದಲಿನವರೇ ಆದರೂ ಹೊಸತನ ಬಿಂಬಿಸಲು ಮಂದರ್ತಿ ಅಣ್ಣಪ್ಪ ನಾಯ್ಕರನ್ನು "ಎಂ.ಎ.ನಾಯ್ಕರು" ಎಂದು ಕರೆದರು. ಅದಕ್ಕೆ ಸರಿಯಾಗಿ ಎಂ.ಎ.ನಾಯ್ಕರ ಕಸಬು ಮತ್ತು ಪರಿಶ್ರಮಗಳೂ ಇದ್ದವು. ಎಂ.ಎ.ನಾಯ್ಕರು ಪ್ರಧಾನ ಸ್ತ್ರೀ ವೇಷಧಾರಿಗಳಾದರು. ಮೇಳ ಹಲವು ಯಶಸ್ವಿ ತಿರುಗಾಟಗಳನ್ನೂ ಪೂರೈಸಿತು. ಅಂದು ಪ್ರಧಾನ ಸ್ತ್ರೀ ವೇಷದ ಪಟ್ಟವೇರಿದ ಎಂ.ಎ.ನಾಯ್ಕರು ಮತ್ತೆ ಹಿಂದಿರುಗಿ ನೋಡಲಿಲ್ಲ. ಸರಿ ಸುಮಾರು ನಾಲ್ಕು ದಶಕಗಳ ಕಾಲ ಮೇಳದ ತಿರುಗಾಟ ನಡೆಸಿದರು ಎಂ.ಎ.ನಾಯ್ಕರು. ಅದರಲ್ಲಿ ಇಪ್ಪತ್ತೈದು ವರ್ಷಗಳಿಗಿಂತಲೂ ಹೆಚ್ಚು ಕಾಲ ಪ್ರಧಾನ ಸ್ತ್ರೀ ವೇಷಧಾರಿಯಾಗಿದ್ದರು. ಪ್ರತಿಸ್ಪರ್ಧಿಗಳನ್ನೆದುರಿಸಬೇಕಾದ ಸಂದರ್ಭವೇ ಬರಲಿಲ್ಲ. ರಾಣಿಯಂತೇ ಮೆರೆದು ವೃತ್ತಿ ಜೀವನಕ್ಕೆ ಗೌರವದ ವಿದಾಯ ಹೇಳಿದರು. ಇವಿಷ್ಟು ಎಂ.ಎ.ನಾಯ್ಕರ ಕಿರು ಪರಿಚಯ ಸರಿ, ಅಣ್ಣಪ್ಪ ನಾಯ್ಕರು ಯಾರು? ಎಲ್ಲಿಯವರು?. ಅಣ್ಣಪ್ಪ ನಾಯ್ಕರ ಹುಟ್ಟೂರು, ಉಡುಪಿ ತಾಲೂಕಿನ ಪ್ರಸಿದ್ಧ ಶಕ್ತಿ ದೇವತಾ ಕ್ಷೇತ್ರ "ಮಂದರ್ತಿ". ಒಂದರ್ಥದಲ್ಲಿ ನಡುತಿಟ್ಟು ಯಕ್ಷಗಾನದ ತವರು. ತಂದೆ ಕರಿಯ ಮರಕಾಲ. ತಾಯಿ ಬುಡ್ಡು ಮರಕಾಲ್ತಿ. ಕುಟುಂಬ ಮೀನುಗಾರರದಾದರೂ ವೃತ್ತಿ ಅದಲ್ಲ. ಕೃಷಿಯಾಧಾರಿತ ಕುಟುಂಬ. ಹಾಗಂತ ಹೇರಳ ಕೃಷಿ ಭೂಮಿ, ತಂದೆಯ ಮನೆಯಲ್ಲೂ ಇರಲಿಲ್ಲ. ತಾಯಿಯ ಮನೆಯಲ್ಲೂ ಇರಲಿಲ್ಲ. ನಾಲ್ಕಾರು ಮಕ್ಕಳನ್ನು ಪಡೆದ ದಂಪತಿಗಳಿಗೆ ಅವರಿಗೆ ಹೊಟ್ಟೆಗೆ ಬಟ್ಟೆಗೆ, ಶಿಕ್ಷಣಕ್ಕೆ ಕೊಡುವಷ್ಟು ಸಂಪತ್ತಿರಲಿಲ್ಲ. ಆದ್ದರಿಂದ ಮಕ್ಕಳ್ಯಾರು ಹೈಸ್ಕೂಲು ಮೆಟ್ಟಿಲು ಹತ್ತಲಿಲ್ಲ. ಅಷ್ಟರಲ್ಲೇ ಬೇರೆ ಬೇರೆ ಉದ್ಯೋಗವನ್ನರಿಸಿ ಜೀವನದ ಜೋಳಿಗೆ ತುಂಬಿಸಿಕೊಳ್ಳಲು ಹೊರಟಾಗಿತ್ತು. ದಂಪತಿಗಳ ಚತುರ್ಥ ಪುತ್ರ ಅಣ್ಣಪ್ಪನೂ ಆರನೇ ತರಗತಿಗೇ ಔಪಚಾರಿಕ ಶಿಕ್ಷಣಕ್ಕೆ ವಿದಾಯ ಹೇಳಿ ದನ ಕಾಯುವ ಕಾಯಕಕ್ಕೆ ಮುಂದಾಗಬೇಕಾದುದು ಬಡತನದ

ಬೇಡಿಕೆಯಾಗಿತ್ತು. ಮಂದರ್ತಿ ಮೇಳದ ಆಟ ಮನೆಯ ಸುತ್ತ ಮುತ್ತ ಹತ್ತಾರು ಕಡೆ ನಡೆಯುತ್ತಿತ್ತು. ತಪ್ಪದೇ ಹೋಗುವುದು ಪರಿಪಾಠವಾಯ್ತು. ಆಗ ಆ ಮೇಳದಲ್ಲಿದ್ದ ಪ್ರಸಿದ್ಧ ಕಲಾವಿದರಾಗಿದ್ದ ಶಿರಿಯಾರ ಮಂಜು ನಾಯ್ಕರು, ಕೊರ್ಗಪ್ಪ ಹಾಸ್ಯಗಾರರು, ಕೋಟ ವೈಕುಂಠರ ಕಲಾ ಪ್ರದರ್ಶನ ಕಂಡು ಆಕರ್ಷಿತರಾದನು ಬಾಲಕ ಅಣ್ಣಪ್ಪ. ತಾನೂ ಅವರಂತಾಗಬೇಕೆಂಬ ಬಯಕೆ ಮನದಲ್ಲಿ ಮೊಳೆಯತೊಡಗಿತು. ಬಯಕೆಯನ್ನು ಬಹುಕಾಲ ಅದುಮಿಡಲಾರದೆ ಮನೆಯ ಸಮೀಪದ ಕಲಾವಿದ ಸುರ್ಗಿಕಟ್ಟೆ ಹೆರಿಯ ಗಾಣಿಗರನ್ನು ಸಂಪರ್ಕಿಸಿದ ಹುಡುಗ. ಅವರು ಅವನನ್ನು 1964–65 ರಲ್ಲಿ ಅಮೃತೇಶ್ವರಿ ಮೇಳಕ್ಕೆ ಸೇರಿಸಿದರು.

ಒಂದು ತಿರುಗಾಟ ಹೇಗೋ ಮುಗಿಯಿತು. ಮಳೆಗಾಲ ಆರಂಭವಾಯಿತು. ಹುಡುಗನಲ್ಲಿನ ಕಲಾಸಕ್ತಿ, ಕಲಿಯಬೇಕೆಂಬ ತುಡಿತ ಆತನನ್ನು ಸುಮ್ಮನುಳಿಯಲು ಬಿಡಲಿಲ್ಲ. ಮೇಳದ ಭಾಗವತರೂ, ಉತ್ತಮ ಗುರುಗಳೂ ಆದ ನಾರಣಪ್ಪ ಉಪ್ಪೂರರ ಮನೆ ಮಾರ್ವಿಯಲ್ಲಿ. ಆ ಕಡೆಗೆ ಹೊರಟಿತು ಪಯಣ. ಮೇಳ ಆರಂಭವಾಗುವವರೆಗಿನ ಆರು ತಿಂಗಳು ಸಾರ್ಥಕ ಶಿಷ್ಯವೃತ್ತಿ. ತಾಳ ಹೆಜ್ಜೆ, ಶೃತಿ, ಲಯ, ಗತಿಗಳ ತಾತ್ವಿಕ ಪಾಠ ಪರಿಪೂರ್ಣವಾಗಿ ನಡೆಯಿತು. ಸ್ವಂತ ಆಯ್ಕೆಯ, ಆಸಕ್ತಿಯ ಕ್ಷೇತ್ರವಾದ್ದರಿಂದ ನಡೆದ ಕಲಿಕೆ ಮನಕ್ಕೆ ನಾಟಿತು ಬಹುಬೇಗ ನೆಲೆಗೊಂಡಿತು, ಸ್ಥಿರವಾಯಿತು. ಮುಂದಿನ ದೀರ್ಘವ್ಯವಸಾಯಕ್ಕೆ ಭೂಮಿಕೆ ಹಸನುಗೊಂಡಿತು. ಕಲಿಕೆ ಸ್ವಯಂಪ್ರೇರಿತವಾದಾಗ ಕಲಿಕೆ ಪ್ರಕ್ರಿಯೆ ಪರಿಣಾಮಕಾರಿಯಾಗುತ್ತದೆ, ಫಲಪ್ರದವಾಗುತ್ತದೆ.

ಗುರುಗಳಿದ್ದ ಅಮೃತೇಶ್ವರಿ ಮೇಳಕ್ಕೆ ಸೇರ್ಪಡೆಯೂ ನಡೆಯಿತು. ಕೋಡಂಗಿ ಬಾಲಗೋಪಾಲ, ಪೀಠಿಕೆ ಸ್ತ್ರೀ ವೇಷ, ಮೂರನೇ ಸ್ತ್ರೀ ವೇಷ ಬಳಿಕ ಒತ್ತು ಸ್ತ್ರೀ ವೇಷ. ಗುರುಗಳೊಂದಿಗೆ ಸುಮಾರು ಹನ್ನೆರಡು ವರ್ಷಗಳ ತಿರುಗಾಟದ ಪ್ರಾಯೋಗಿಕ ಕಲಿಕೆ, ಕಸುಬನ್ನು ಪರಿಪೂರ್ಣತೆಯತ್ತ ಕೊಂಡೊಯ್ದಿತು. ಅಣ್ಣಪ್ಪ ನಾಯ್ಕನನ್ನು ಎಮ್.ಎ.ನಾಯ್ಕರನ್ನಾಗಿಸಿತು. ಆದರೆ ಈ ದಿನಗಳು ಸುಖದ ದಿನಗಳಾಗಿರಲಿಲ್ಲ. ಹಂತ ಹಂತವಾಗಿ ಮೇಲೇರುವಿಕೆ ಸರಳವಾಗಿರಲಿಲ್ಲ. ಸ್ವ–ಅಧ್ಯಾಯ, ಸ್ವ– ಚಿಂತನೆ ಎಡೆಬಿಡದೆ ನಡೆಯುತ್ತಿತ್ತು. ತನ್ನ ವೇಷ ಮುಗಿದ ಕೂಡಲೇ ಮಲಗಿ ಸವಿ ನಿದ್ರೆಯ ಸುಖವಿರಲಿಲ್ಲ. ವೇಷಕ್ಕಿಂತ ಮೊದಲು ಕಾಡು ಹರಟೆಯ ಕುರಿತು ಒಲವಿರಲಿಲ್ಲ. ರಾತ್ರಿ ಆಟವಾಯಿತು. ಹಗಲು ದಿನವಿಡೀ ನಿದ್ದೆಯೇ? ಅದೂ ಇಲ್ಲ. ಎಲ್ಲೋ ಒಂದಷ್ಟು ಹೊತ್ತು ನಿದ್ದೆ. ಉಳಿದ ಸಮಯದಲ್ಲಿ ಪಾತ್ರಗಳಿಗೆ ಪೂರಕವಾದ ಗ್ರಂಥಾಧ್ಯಯನ. ಇತರರ ಪಾತ್ರ ಚಿತ್ರಣದ ಕುರಿತು ಚಿಂತನೆ. ತಾನೇ ಆ ಪಾತ್ರ ಮಾಡುವುದಾದಲ್ಲಿ ಅದರ ನಿರ್ವಹಣೆ ಹೇಗೆ ಎನ್ನುವುದರ ಕುರಿತು ನಿರಂತರ ಚಿಂತನ–ಮಂಥನ. ರಾತ್ರಿ ವೇಷ ಮಾಡಿಕೊಳ್ಳುತ್ತಿರುವಾಗಲೂ ಪಾತ್ರದ ಕುರಿತೇ ಯೋಚನೆ. ಪದ ಯಾವುದು, ಅಲ್ಲಿನ

ಪದಗಳಿಗೆ ಅರ್ಥ ಯಾವುದು? ಚಿಕ್ಕದಾಗಿ ಚೊಕ್ಕವಾಗಿ ವಿಷಯ ಮಂಡನೆ ಹೇಗೆ.? ಸಹ ಪಾತ್ರದ ಪ್ರಶ್ನೆಗಳೇನು? ಅವುಗಳಿಗೆ ಉತ್ತರ ಯಾವುದು? ಇತ್ಯಾದಿಗಳ ಕುರಿತೇ ಸದಾ ಯೋಚನೆ. ಮಂಡಿಸುವ ವಿಷಯ ಪಾತ್ರೋಚಿತ ಮತ್ತು ಸಂದರ್ಭೋಚಿತವಾಗಿರಬೇಕು. ಶೈಲಿ ಆಕರ್ಷಕವಾಗಿರಬೇಕು. ಬಳಸುವ ಶಬ್ದ ವಾಕ್ಯಗಳು ಅರ್ಥಗರ್ಭಿತವಾಗಿರಬೇಕು. ಕೇಳುಗರಿಗೆ ಹಿತಾನುಭವ ನೀಡಲು ಪ್ರಾಸಬದ್ಧವಾಗಿರಬೇಕು ಎಂಬೆಲ್ಲಾ ಯೋಚನೆಗಳೊಂದಿಗೆ ಅರ್ಥಗಾರಿಕೆ ಸಿದ್ಧವಾಗುತ್ತಿತ್ತು. ಅನ್ಯತ್ರ ಅಲಭ್ಯವಾದ ಪಾತ್ರ ನಿರ್ವಹಣೆ ಇದರಿಂದ ಸಾಧ್ಯವಾಗುತ್ತಿತ್ತು. ಸತತವಾದ ಅಧ್ಯಯನ, ಚಿಂತನೆಗಳು ಯಶಸ್ಸನ್ನು ತಂದುಕೊಟ್ಟವು. ಆದ್ದರಿಂದಲೇ ಅಣ್ಣಪ್ಪ ನಾಯ್ಕ ಎಂ.ಎ.ನಾಯ್ಕರಾದರು. ಆದ್ದರಿಂದಲೇ ಎಂ.ಎ.ನಾಯ್ಕರ ಅರ್ಥಗಾರಿಕೆಯ ಒಂದು ವಾಕ್ಯಕ್ಕೆ ಹತ್ತು ವಾಕ್ಯಗಳ ವಿವರಣೆ ನೀಡಿಕೆ ಸಾಧ್ಯ. ಅಷ್ಟಾಗಬೇಕಾದರೆ ಆ ಒಂದು ವಾಕ್ಯದ ಹಿಂದೆ ನೂರು ಚಿಂತನೆಗಳಿರುತ್ತವೆ. ಆದ್ದರಿಂದಲೇ ಘಟಾನುಘಟಿಗಳಿಂದಲೂ ಸೈ ಎನ್ನಿಸಿಕೊಳ್ಳುವುದು ಎಂ.ಎ.ನಾಯ್ಕರಂತಹ ಅಧ್ಯಯನ ಶೀಲರಿಗೆ ಮಾತ್ರ ಸಾಧ್ಯವಾಯಿತು. ವಾಸುದೇವ ಸಾಮಗರಂತಹ ಮಾತಿನ ಮಲ್ಲರೆದುರೂ ಗೆಲ್ಲುವುದು ಸಾಧ್ಯವಾಯಿತು. ಸಾಮಗರ, ಮಾತಿನಲ್ಲಿ ಸಾಟಿಯಿಲ್ಲದ ಉತ್ತರನೆದುರು ಉತ್ತರೆಯಾಗಿ ಉತ್ತರ ಕೊಡುವುದು ಎಂ.ಎ.ನಾಯ್ಕರಂತವರಿಗೆ ಮಾತ್ರ ಸಾಧ್ಯವಾಯಿತು. ಉತ್ತರನ ಪೌರುಷ ಜಯಭೇರಿ ಬಾರಿಸಿತು.

ರಂಗಸ್ಥಳದ ರಾಜ, ನಗರ ಜಗನ್ನಾಥ ಶೆಟ್ಟಿಯವರದು ರಾಜ ಗಾಂಭೀರ್ಯದ ವೇಷ. ಹತ್ತು ಮಾತುಗಳಾಡುವಲ್ಲಿ ಒಂದು ಮಾತನ್ನಾಡಿ ಅಷ್ಟನ್ನೂ ಕಟ್ಟಿಕೊಡುವ ಅದ್ಭುತ ಸಾಮರ್ಥ್ಯವುಳ್ಳ ಕಲಾವಿದ ಅವರು. ಕಟ್ಟಿದ ಮುಷ್ಟಿಯನ್ನು ತೋರುತ್ತಾ ಇದರೊಳಗೇನಿದೆ ಎಂದು ಎದುರಿರುವರನ್ನು ಕೇಳಿದರೆ "ಒಗ್ಗಟ್ಟಿನಲ್ಲಿ ಬಲವಿದೆ" ಅಂತ ಹೇಳಲು ಬಾರದಿದ್ದಲ್ಲಿ ರಂಗಸ್ಥಳದಲ್ಲೇ ಬೈದು ಬಿಡುವ ಸ್ವಭಾವದ ಕಲಾವಿದರವರು. ಅಂತಹ ಗುಣದ ಉಗ್ರಸೇನನೆದುರು ಗುಣ ಸುಂದರಿಯಾಗಿ ಪಿತ ಮೇಲೋ ಪತಿ ಮೇಲೋ ಎಂಬ ವಾದದಲ್ಲಿ ಪತಿಯೇ ಸರ್ವಸ್ವವೆಂದು ವಾದಿಸಿ ಸಾಧಿಸುವುದು ಸುಲಭದ ಮಾತಲ್ಲ. ವಾದದಿ ಸೊತರೆ, ಪ್ರಸಂಗವೂ ಪಾತ್ರವೂ ಸತ್ತಂತೆ. ಅದಕ್ಕಿಂತ ಮಿಗಿಲಾಗಿ ನಗರದವರ ಮುನಿಸು ಭಯಾನಕ. ಯಶಸ್ವಿಯಾಗಿ ನಿಭಾಯಿಸಿದರು ಎಮ್.ಎ.ನಾಯ್ಕರು ಅಧ್ಯಯನಶೀಲತೆ ಅವರನ್ನು ಗೆಲ್ಲಿಸಿತು.

ಸಮಗ್ರ ಭೀಷ್ಮ ಆಗಿನ ಪ್ರಸಿದ್ಧ ಪ್ರಸಂಗಗಳಲ್ಲೊಂದು, ನಗರದವರ ವಿಜಯದ ಭೀಷ್ಮನೆದುರು ಅಂಬೆಯ ಪಾತ್ರ ನಿಜಕ್ಕೂ ಪಂಥಾಹ್ವಾನ. ಸರಸಿಜಾಂಬಕಿಯರೆ ಕೇಳಿ, ಅಲ್ಲಿಂದ ರಸ ಘಳಿಗೆ ಆರಂಭ. ಕೇಳು ಭೀಷ್ಮಾಚಾರ್ಯ ಪದ್ಯದ ಕೊನೆಯಲ್ಲಿ "ಭೂಲಲಾಮರ ಜಯಿಸಿ ಮೆರದಿಹ ತೋಳಿನಲಿ..." ಪದ್ಯಕ್ಕೆ ಸರಿಯಾಗಿ ಅರ್ಥ. ಮುಂದೆ ಅದೇ ಕರುಣನಿಧಿ ಅವಧರಿಸು ಪದ್ಯದಲ್ಲಿ ಕೊನೆಯ ಭಾಗ ಮನ್ಮನದೊಳೊಲಿದವನ ಬಿಡಬಹುದೆ ಪೇಳು.?

ಅಂಬೆ ಅರ್ಥ ನಿಲ್ಲಿಸಿದಲ್ಲಿಗೆ ಭೀಷ್ಮನ ಪ್ರಶ್ನೆಯ ಉರುಳು- "ಹೌದು ಅಂಬೆ, ಮನ್ಮನದೊಳೊಲಿದವನ ಬಿಡಬಾರದು. ಆದರೆ ನೀನಾಗ ಹೇಳಿದಿ ಭೂಲಾಮರ ಜಯಿಸಿ ಮೆರದಿಹ ತೋಳಿನಲಿ ಬಿಗಿದಪ್ಪಿ ಅಂತ. ಹಾಗೆ ಕೇಳುವಾಗ ಮನ್ಮನದೊಳಿದವನ ಬಿಡಲು ಸಿದ್ಧಳಿರುವೆಯಾ?." ಸಾಮಾನ್ಯರ ಅಂಬೆಯಾದರೆ ಬಾಯಿ ಕಟ್ಟಿದಂತೆ ಸ್ತಬ್ಧ. ಅಲ್ಲದಿದ್ದರೆ ಯಾವುದೋ ಉತ್ತರ. ಅದು ಯಾರಿಗೂ ಸಮಾಧಾನಕರವಾಗುತ್ತಿರಲಿಲ್ಲ. ಒಟ್ಟು ಚರ್ಚೆ ಮುಗಿಯುತ್ತಿತ್ತು. ಒಣ-ನೀರಸ ಚರ್ಚೆಯೊಂದಿಗೆ ಚೌಕಿಗೆ ಬರುವುದಿತ್ತು. ಒಂದು ದಿನ ಅಂಬೆ ಮಾಡಬೇಕಾದ ಪ್ರಧಾನ ಸ್ತ್ರೀ ವೇಷಧಾರಿ ಬಾರದೆ ಇದ್ದುದರಿಂದ ಒತ್ತು ಸ್ತ್ರೀ ವೇಷ ಮಾಡುತ್ತಿದ್ದ ಎಂ.ಎ.ನಾಯ್ಕರದೇ ಯೋಜನಗಂಧಿ ಮಾಡಿ ಅಂಬೆ. ಭೀಷ್ಮನಿಂದ ಹೀಗೆ ಪ್ರಶ್ನೆ ,ಬಿಡಲು ಸಿದ್ಧಳಿರುವೆಯಾ? ಅಂಬೆಯ ದಿಟ್ಟ ಮತ್ತು ಸ್ಪಷ್ಟ ಉತ್ತರ "ಹೌದು". ಭೀಷ್ಮ ಒಂದು ಕ್ಷಣ ನಿಬ್ಬೆರಗು. ಹೌದಾ? ಅನಿರೀಕ್ಷಿತವಾಗಿತ್ತು ಭೀಷ್ಮನಿಗೆ. ಅಂಬೆಯದು ಸಮರ್ಪಕ ಸಮರ್ಥನೆ. "ಆಚಾರ್ಯರೆ, ಕಾಳಿಯ ವಿಶ್ವವಿದ್ಯಾಲಯದಲ್ಲಿ ಓದಿದ ಅಂಬೆಗೆ ಭೀಷ್ಮ ಮದುವೆಯಾಗಲಾರ ಎಂಬುದು ತಿಳಿಯದ ವಿಷಯವೇನೂ ಅಲ್ಲ. ನೀವು ಸಿದ್ಧರಾಗುವುದಿಲ್ಲ ಎಂದು ಗೊತ್ತಿದ್ದುದರಿಂದಲೇ ಕೇವಲ ನಾಟಕೀಯವಾಗಿ ಆ ಮಾತಾಡಿದ್ದು. ಇನ್ನು ಒಂದು ವೇಳೆ ನೀವು ನಿಮ್ಮ ಭೀಷಣವಾದ ಪ್ರತಿಜ್ಞೆಯನ್ನು ಬಿಟ್ಟು, ದೇವಾನುದೇವತೆಗಳಿಂದಾದ ನಾಮಕರಣವನ್ನು ತ್ಯಜಿಸಿ ನೀವು ಸಿದ್ಧರಾಗುತ್ತೀರಿ ಅಂತಾದರೆ ನನ್ನ ಮನದೊಳೊಲಿದವನ ಬಿಡದೆ ಏನು? ನಿಮ್ಮ ತ್ಯಾಗದೆದರು ನನ್ನ ತ್ಯಾಗ ಏನು ಮಹಾ. ?ಅದಕ್ಕಾಗಿಯೇ ನಾನು ಮನ್ಮನದೊಳೊಲಿದವನ ಬಿಡುತ್ತೇನೆ ಅಂತ ಹೇಳಿದ್ದು." ಸಭೆಯಲ್ಲಿ ಅಮೋಘ ಕರತಾಡನ. ಇದು ಎಂ.ಎ.ನಾಯ್ಕರು ಪ್ರಬಲ ಎದುರಾಳಿಯ ಎದುರು ಗೆಲ್ಲುವ ಪರಿ.

ಎಂ.ಎ.ನಾಯ್ಕರು ಪ್ರಧಾನ ಸ್ತ್ರೀ ವೇಷದ ಸ್ಥಾನಕ್ಕೆ ತಲುಪುವ ಕಾಲಕ್ಕೆ ಡೇರೆ ಮೇಳವಾಗಿದ್ದ ಅಮೃತೇಶ್ವರಿ ಮೇಳದಲ್ಲಿ ಗುರುಗಳಾದ ನಾರಣಪ್ಪ ಉಪ್ಪೂರರು, ಮದ್ಲೆಗಾರ ತಿಮಪ್ಪ ನಾಯ್ಕರು, ಪದ್ಮಶ್ರೀ ಪುರಷ್ಕೃತ ಚಿಟ್ಟಾಣಿ ರಾಮಚಂದ್ರ ಹೆಗ್ಡೆ, ನಗರ ಜಗನ್ನಾಥ ಶೆಟ್ಟಿ, ಆ್ಯಕ್ಟರ್ ಜೋಷಿ, ಮಲ್ಪೆ ವಾಸುದೇವ ಸಾಮಗ ಮುಂತಾದ ಖ್ಯಾತನಾಮರಿದ್ದ ಕಾಲ. ಗುಂಡು ಸೀತಾರಾಮ ರಾಯರ "ಯಕ್ಷಲೋಕ ವಿಜಯ" ಪ್ರಸಂಗದಲ್ಲಿ ಚಿಟ್ಟಾಣಿಯವರೊಂದಿಗೆ ಜೋಡಿ ವೇಷ "ಸುಮಗಂಧಿ", ಇವರ ಪಾತ್ರವಾಗಿತ್ತು. ಈ ಜೋಡಿ ಅತ್ಯಂತ ಯಶಸ್ವಿ ಎನ್ನುವುದಕ್ಕೆ ಆ ಪ್ರಸಂಗ ಸುಮಾರು 200 ಪ್ರದರ್ಶನಗಳನ್ನು ಕಂಡುದೇ ಸಾಕ್ಷಿ. ಸುಮಾರು 18 ವರ್ಷಗಳ ಕಾಲ ಅಮೃತೇಶ್ವರಿ ಮೇಳದಲ್ಲಿ ತಿರುಗಾಟದ ಬಳಿಕ ಅರಾಟೆ ಮಂಜುನಾಥರೊಂದಿಗೆ ಮೂಲ್ಕಿ ಮೇಳಕ್ಕೆ ಸೇರ್ಪಡೆಯಾಗಿ ಅಲ್ಲಿ ಮೂರು ವರ್ಷಗಳ ತಿರುಗಾಟ ನಡೆಯಿತು.ಬಳಿಕ ಶಿರಸಿ ಪಂಚಲಿಂಗೇಶ್ವರ ಮತ್ತು ಇಡಗುಂಜಿ ಮೇಳಗಳು ಜಂಟಿಯಾಗಿ ತಿರುಗಾಟ ಆರಂಭಿಸಿದಾಗ ಎಮ್.ಎ. ನಾಯ್ಕರು ಆ ಮೇಳಕ್ಕೆ

ಸೇರ್ಪಡೆಗೊಂಡರು. ಈ ಅವಧಿಯಲ್ಲಿ ಕೆರೆಮನೆ ಶಂಭುಹೆಗ್ಡೆಯವರೊಂದಿಗೆ ಚಂದ್ರಮತಿ–ಹರಿಶ್ಚಂದ್ರ, ನಳ–ದಮಯಂತಿ, ಚಿಟ್ಟಾಣಿಯವರೊಂದಿಗೆ ಕೀಚಕ–ಸೈರಂಧ್ರಿ, ಭಸ್ಮಾಸುರ ಮೋಹಿನಿ ,ಲಂಕಾದಹನದ ರಾವಣ–ಸೀತೆ ಮುಂತಾದ ಪಾತ್ರಗಳು ಬಹಳ ಪ್ರಖ್ಯಾತವಾದವು. ಪಾತ್ರೋಚಿತವಾದ ವೇಷ ಭೂಷಣ, ಸ್ವರಭಾರ, ಭಾವನೆ, ಅಧ್ಯಯನ ಪೂರ್ಣ ಅರ್ಥಗಾರಿಕೆ, ಸಮರ್ಥ ಪ್ರತ್ಯುತ್ಪನ್ನಮತಿ, ಕಿರಿದರಲ್ಲಿ ಹಿರಿದನ್ನು ಹೇಳುವ ಜಾಣ್ಮೆ, ಇವರ ಪ್ರಖ್ಯಾತಿಗೆ ಪ್ರಮುಖ ಕಾರಣಗಳು. ಭಾವತಾದ್ಯಾತ್ಮ ಇವರ ವೈಶಿಷ್ಟ್ಯ ಆದ್ದರಿಂದ ಇವರಾಡುವ ಮಾತು ಕಡಿಮೆಯಾದರೂ ಅದು ಆವರಣವನ್ನು ನಿರ್ಮಿಸುತ್ತದೆ. ಸನ್ನಿವೇಶವನ್ನು ಸೃಷ್ಟಿಸಿ ಬಿಡುತ್ತದೆ. ಪ್ರೇಕ್ಷಕರನ್ನು ಚುಂಬಕದಂತೆ ಸೆಳೆಯುತ್ತದೆ. ಇವರ ಸಮಯೋಚಿತವಾದ ಒಂದು ಹೂಂಕಾರ, ಒಂದು ಕ್ಷಣದ ಮೌನವೂ ನೂರು ಮಾತುಗಳನ್ನು ಹೊರಹೊಮ್ಮಿಸುತ್ತದೆ, ರಸಸೃಷ್ಟಿ ಸಾಧ್ಯವಾಗುತ್ತದೆ.

ಸುಮಾರು ನಾಲ್ಕು ದಶಕಗಳ ಕಾಲ ನಡು ತಿಟ್ಟಿನ ಸ್ತ್ರೀ ಭೂಮಿಕೆಯಲ್ಲಿ ರಾಣಿಯಾಗಿ ಮೆರೆದ ಶ್ರೀಯುತರು ಇದೀಗ ನಿವೃತ್ತ ಜೀವನದ ಸವಿಯುಣ್ಣುತ್ತಿದ್ದಾರೆ. ಯಕ್ಷಗಾನ ತನಗೆ ಆರ್ಥಿಕ ಭದ್ರತೆ ಒದಗಿಸಿತು ಎಂದು ಪ್ರಾಮಾಣಿಕವಾಗಿ ನುಡಿಯುತ್ತಾರೆ. ಮನೆಯಾಸ್ತಿಯ ಗೋಜಿಗೆ ಹೋಗದೆ ಮಂದರ್ತಿಯಲ್ಲೇ ಸ್ವಂತ ಖರೀದಿಸಿದ ಆಸ್ತಿಯಲ್ಲಿ ಸ್ವತಂತ್ರವಾಗಿ ನಿರ್ಮಿಸಿಕೊಂಡ ಮನೆಯಲ್ಲಿ ಸಂತೃಪ್ತಿಯ ಜೀವನ ಸಾಗಿಸುತ್ತಿದ್ದಾರೆ. ಪತ್ನಿ ಗುಲಾಬಿ ಇವರ ಸಂಸಾರ ರಥದ ಸಾರಥಿ. ಮಕ್ಕಳಾದ ಪ್ರಕಾಶ, ವಾಣಿಶ್ರೀ, ದೀಪಾ ಮತ್ತು ಪ್ರೀತಿ ವಿದ್ಯಾವಂತರು. ಉದ್ಯೋಗವಂತರು. ಮಗ ಪ್ರಕಾಶ ಪ್ರೌಢಶಾಲಾ ಅಧ್ಯಾಪಕನಾದರೆ ವಾಣಿ ಮತ್ತು ದೀಪಾ ಪ್ರಾಥಮಿಕ ಶಾಲಾಶಿಕ್ಷಕಿಯರು. ಇವರ ಪತಿಯಂದಿರೂ ಸಹ ಶಿಕ್ಷಕ ವೃತ್ತಿಯವರು. ಕಿರಿಯ ಮಗಳು ಮತ್ತು ಅಳಿಯ ಬೆಂಗಳೂರಿನಲ್ಲಿ ಇಂಜಿನಿಯರ್ ಉದ್ಯೋಗಸ್ಥರು. ಈ ಸುಖೀ ಸಂತೃಪ್ತ ಸಾಂಸಾರಿಕ ಜೀವನದ ಹಿಂದಿನ ರೂವಾರಿ ಮನೆಯೊಡತಿ–ಮನದೊಡತಿ ಗುಲಾಬಿ ಎನ್ನಲು ಮರೆಯುವುದಿಲ್ಲ ನಾಯ್ಕರು.

.**************************************************************

### ಹೊನ್ನುಡಿ

ಆವ ರಕ್ಷಣೆ ಇರದೆ ದೈವ ಬಲವೊಂದಿರಲು ವ್ಯಕ್ತಿ ಆಪತ್ತಿನೊಳ್ ರಕ್ಷಿಸಲ್ಪಡುವ.
ದೈವ ಹೀನಗೆ ನಾವು ರಕ್ಷಣೆಯ ನೀಡಿದರೂ ರಕ್ಷಿಸಲ್ಪಡನು ಆಪತ್ತಿನೊಳಗೆ.
ಇದಕೆ ನಿಜ ಸಾಕ್ಷಿ ಭಕ್ತ ಧ್ರುವ– ಪರೀಕ್ಷಿತರು.

–ಎಂ.ಎ.ನಾಯ್ಕ್

# ದಕ್ಷಯಜ್ಞ – "ದಾಕ್ಷಾಯಿಣಿ"

ಏನಿದು ವಿಚಿತ್ರ, ಅತ್ಯಂತ ಎತ್ತರವೂ ಸುಂದರವೂ ಆದ ಪ್ರದೇಶ, ಇದನ್ನೇ ಕೈಲಾಸ ಪರ್ವತವೆಂದು, ಬೆಳ್ಳಿಯ ಬೆಟ್ಟವೆಂದು, ರಜತ ಗಿರಿಯೆಂದೇ ಕರೆಯುತ್ತಿದ್ದಾರೆ. ಇಲ್ಲಿ ಸರ್ವಾತ್ಮಕನು, ಸರ್ವವ್ಯಾಪಕನು, ಸರ್ವೇಶ್ವರನೂ ಆದ ಭಗವಂತನು ಪ್ರಮಥಾದಿ ಗಣಗಳೊಂದಿಗೆ ನೆಲೆಸಿದ್ದಾನೆ. ಆದ್ದರಿಂದಲೇ ಈ ಕ್ಷೇತ್ರಕ್ಕೊಂದು ಪಾವಿತ್ರ್ಯ ಉಂಟಾಯಿತು. ದೂರದಿಂದಲೇ ಕಂಡರೂ ಕಂಡವರ ಪಾಪ ಪರಿಹಾರವಾಗುವುದೆನ್ನುವ ಪ್ರಬಲವಾದ ನಂಬುಗೆ ಭಕ್ತರ ಮನದಲ್ಲಿ. ಇಂತಹ ಶಿವನಿಗೆ ಸತಿಯಾದ ನನ್ನನ್ನು ಸತಿದೇವಿ ಎಂದು, ದಕ್ಷನ ಮಗಳಾದುದರಿಂದ ದಾಕ್ಷಾಯಿಣಿ ಎಂದು ಗೌರವರ್ಣದಿಂದ ಕೂಡಿದ್ದರಿಂದ ಗೌರಿ ಎಂದೂ ಕರೆಯುತ್ತಿದ್ದಾರೆ. ಬೆಟ್ಟದ ತುತ್ತ ತುದಿಯಲ್ಲಿ ನಾನಿದ್ದರೇನಂತೆ? ಬೆಟ್ಟದ ಮೂಲವೂ ಮಣ್ಣಿನಿಂದಲೇ ಕೂಡಿದೆ. ಆದ್ದರಿಂದ ಮಣ್ಣಿನ ಸಂಬಂಧದ ಗುಣಗಳು ನನ್ನಲ್ಲಿ ವ್ಯಕ್ತಗೊಂಡರೆ ಆಶ್ಚರ್ಯವಿಲ್ಲ. ಆಸೆ ನಿರಾಸೆ, ಬೇಸರ ಇತ್ಯಾದಿಗಳು.ಇಂದ್ಯಾಕೋ ನನ್ನನ್ನು ಮುತ್ತಿಕೊಳ್ಳುತ್ತಿವೆ. ಶಿವನ ಸೇವೆಯಿಂದಲೇ ಸಂತುಷ್ಟಳಾಗುತ್ತಿದ್ದ ನಾನು ಇವತ್ತು ಆಲಸ್ಯ, ಬೇಸರ ಉಂಟಾದುದರಿಂದ ಅವರಿಂದ ಸ್ವಲ್ಪ ದೂರ ಬಂದೆ. ಆ ಕಡೆ ನೋಡುತ್ತಿದ್ದೇನೆ. ಸಾಲು ಸಾಲಾಗಿ ಯಾರೋ ಹೋಗುತ್ತಿದ್ದಾರೆ. ಯಾರು? ಎಲ್ಲಿ ಹೋಗುತ್ತಿದ್ದಾರೆ?

## ಲಂಕಾದಹನ – ಸೀತೆ

ಶಿವಾಶಿವಾ! ಇದೆಂತಹ ಕರ್ಣ ಕಠೋರವಾದ ಅಸಹ್ಯವಾದ ಅವಾಚ್ಯ ಶಬ್ದಗಳು! ದುರಾತ್ಮನಾದ ರಾವಣ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾನೆ. ಸಾಲದೆಂಬಂತೆ ನನ್ನ ಮೇಲಣ ಆಸೆಯಿಂದ ಮುಂದುವರಿದು ಬರುತ್ತಿದ್ದಾನೆ. ನಾನಿನ್ನು ಸುಮ್ಮನೆ ಕುಳಿತೆ ಅಂತಾದರೆ ಮೌನವೇ ಸಮ್ಮತಿ ಲಕ್ಷಣವೆಂದು ಭಾವಿಸಿ ನನ್ನ ಮೈ ಮೇಲೆ ಕೈಹಾಕುವುದಕ್ಕೆ ಹಿಂದೆ ಮುಂದೆ ನೋಡಲಾರ ಈ ದುರಾತ್ಮ. ಆದ್ದರಿಂದ ಯಾವುದೇ ಕಾರಣದಿಂದ ಯಾವುದೇ ಕಾಲದಲ್ಲಿಯೂ ನನ್ನ ಮನಸ್ಸು ಪರಿವರ್ತನೆಗೊಳ್ಳಲಾರದು ಎಂಬುದನ್ನು ಖಳನಿಗೆ ನಾನು ಸ್ಪಷ್ಟಪಡಿಸಲೇಬೇಕು. ನನ್ನಂತಹ ಪರಮ ಪತಿವ್ರತೆಯರಿಗೆ ಪರಪುರುಷರ ಸ್ಪರ್ಶದರ್ಶನಗಳು ನಿಷಿದ್ಧ. ಆದ್ದರಿಂದ ಖಳನ ಮುಖವನ್ನು ನಾನು ನೋಡಲಾರೆ. ಬದಿಯ ತೃಣವೊಂದನ್ನು ಮುರಿದು ಮುಂದಿಟ್ಟುಕೊಂಡು ಅದನ್ನೇ ನೋಡುತ್ತಾ ಆಡುವ ಮಾತುಗಳೆಲ್ಲ ನೇರ ರಾವಣನಿಗೆ. ರಾವಣನು ತೃಣ ಸಮಾನನು ಎಂಬ ಭಾವನೆಯೂ ಹೌದು. ನನ್ನ ಮಾತುಗಳಿಗೆಲ್ಲಾ ಸಾಕ್ಷಿಯಾರು?

ಸರಮೆ ನೀ ಸಾಕ್ಷಿಯಾಗಿರು ..

ಸರಮೆ, ನನ್ನ ಮಾತುಗಳಿಗೆಲ್ಲ ನೀನೆ ಸಾಕ್ಷಿಯಾಗಿರಬೇಕು. ಮುಂದೊಂದು ದಿನ ಶ್ರೀರಾಮಚಂದ್ರ ಇಲ್ಲಿಗೆ ಬಂದರೆ ರಾವಣ ಏನನ್ನು ಆಡಿದ, ಏನನ್ನು ಮಾಡಿದ ಅಂತ ಕೇಳಿದರೆ ಇಲ್ಲಿ ನಡೆದ ಎಲ್ಲಾ ವಿಷಯಗಳನ್ನು ವಿವರಿಸುವಾಗ ನೀನು ಸಾಕ್ಷಿಭೂತಳಾಗಿರಬೇಕು. ರಾವಣ ಏನೂ ಅಲ್ಲ ಎಂದು ಸಮರ್ಥಿಸುವ ನನ್ನ ಮಾತುಗಳಿಗೂ ನೀನು ಸಾಕ್ಷಿ ಭೂತಳಾಗಿರಬೇಕು. ದುರುಳ ತಾನುತ್ತುಮನಂತೆ ಯಾವುದರಲ್ಲಿ ಉತ್ತಮ ? ಜಾತಿಯಲ್ಲಿಯೋ? ನೀತಿಯಲ್ಲಿಯೋ! ಜಾತಿಯಲ್ಲಿ ಉತ್ತಮನೆಂದು ಭಾವಿಸೋಣವೇ, ತಂದೆ ವಿಶ್ರವಸುಗಳು, ಬ್ರಾಹ್ಮಣರು. ತಾಯಿ ಕೈಕಸೆ–ರಕ್ಕಸಿ ಹಾಗಾದರೆ ಬ್ರಾಹ್ಮಣನಿಂದ ರಕ್ಕಸಿಯಲ್ಲಿ ಹುಟ್ಟಿಬಂದವ. ಇವನು ರಕ್ಕಸನೂ ಅಲ್ಲ, ಬ್ರಾಹ್ಮಣನೂ ಅಲ್ಲ, ಒಬ್ಬ ಬ್ರಹ್ಮರಕ್ಕಸ. ಇವನಿಗೆ ನಿರ್ದಿಷ್ಟವಾದ ಜಾತಿಯೂ ಇಲ್ಲ. ಆದ್ದರಿಂದ ಜಾತಿಯಲ್ಲಿ ಉತ್ತಮನಲ್ಲ. ನೀತಿಯಲ್ಲಿ ಉತ್ತಮನೆಂದು ಭಾವಿಸೋಣವೇ? ಹಾಗೆ ನಿರ್ಧರಿಸಲೂ ಸಾಧ್ಯವಿಲ್ಲ. ಯಾಕೆಂದರೆ, ಪಂಚವಟಿಯ ಪರ್ಣಕುಟೀರದಲ್ಲಿ ನಾನೊಬ್ಬಳೇ ಇದ್ದಾಗ, ಹತ್ತು ತಲೆ, ಇಪ್ಪತ್ತು ಕೈಗಳನ್ನು ಹುಟ್ಟಿನಿಂದಲೇ ಹೊಂದಿದ್ದ ಈ ರಾವಣ ಅದನ್ನೆಲ್ಲ ಅಡಗಿಸಿಟ್ಟುಕೊಂಡು ಸನ್ಯಾಸಿಯ ವೇಷಧಾರಣೆ ಮಾಡಿ, ರಾಮಲಕ್ಷ್ಮಣರಿಲ್ಲದ ಹೊತ್ತಿನಲ್ಲಿ, "ಭಿಕ್ಷಾಂದೇಹಿ ಭಿಕ್ಷಾಂದೇಹಿ" ಎಂದು ಪ್ರಾರ್ಥಿಸಿದ. ಬ್ರಾಹ್ಮಣರ ಬಗ್ಗೆ ,ದೇವರ ಬಗ್ಗೆ, ಋಷಿ ಮುನಿಗಳ ಬಗ್ಗೆ, ಗುರುಹಿರಿಯರ ಬಗ್ಗೆ ಅಪಾರವಾದ ಗೌರವ ಮಿಶ್ರಿತವಾದ ಭಕ್ತಿಭಾವವುಳ್ಳ ನಾನು ಮಹರ್ಷಿಗಳೆಂದು ಭಾವಿಸಿ ಭಿಕ್ಷೆ ನೀಡಲೆಂದು ಹೊರಬಂದೆ. ಆಗ ಈ ಮೋಸಗಾರ

ನನ್ನನು ಎತ್ತಿ ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿಕೊಂಡು ಗಗನಮಾರ್ಗದಲ್ಲಿ ಬರುತ್ತಿದ್ದ. ರಕ್ಷಣೆಗಾಗಿ ನಾನು ಕೂಗಿಕೊಂಡೆ. ನನ್ನ ಆರ್ತನಾದವನ್ನು ಕೇಳಿ, ಹಾರುವ ಹಕ್ಕಿ, ಪಕ್ಷಿರಾಜ ಜಟಾಯು, ಅಲ್ಲಿಯವರೆಗಾಗಿ ಬಂದು ನನ್ನ ರಕ್ಷಣೆಗಾಗಿ ಖಳನೊಂದಿಗೆ ಹೋರಾಡುವುದಕ್ಕೆ ನಿಂತ. ಈ ಪಾಪಿ ಮೋಸದಿಂದ ಜಟಾಯುವಿನ ರೆಕ್ಕೆಗಳನ್ನೇ ಕತ್ತರಿಸಿದ. ಆದರೆ ಅಲ್ಲಿ ಹಾರುವ ಹಕ್ಕಿ ಜಟಾಯುವಿನಲ್ಲಿ ಕಂಡ ಧರ್ಮಬುದ್ಧಿಯನ್ನು ಹತ್ತು ತಲೆ ಇಪ್ಪತ್ತು ಕೈಗಳ ರಾವಣನಲ್ಲಿ ಕಾಣುವುದಕ್ಕಾಗಲಿಲ್ಲ. ಹಾಗಾದರೆ ಈತ ನೀತಿಯಲ್ಲಿ ಉತ್ತಮನಲ್ಲ. ಮತ್ತೊಬ್ಬನ ಹೆಂಡತಿಯನ್ನು ಅಪಹರಿಸುವುದು ಅಪರಾಧವೆಂಬುದು ಈತನಿಗೆ ತಿಳಿಯದೇ ಹೋಯಿತು.

ಸುರರಿಗೆಲ್ಲ ಶ್ರೇಷ್ಠನಂತೆ, ಹೇಗೆ ಸುರರಿಗೆಲ್ಲ ಶ್ರೇಷ್ಠನಾಗುತ್ತಾನೆ? ದೇವೇಂದ್ರಾದಿ ದೇವತೆಗಳೊಂದಿಗೆ ಯುದ್ಧ ಮಾಡಿ ಸೋತಾಗ ಇವನ ಮಗನಾದ ಮೇಘನಾದ ಬಂದು ದೇವೇಂದ್ರನನ್ನು ಯುದ್ಧದಲ್ಲಿ ಸೋಲಿಸಿದನಂತೆ. ಆದ್ದರಿಂದಲೇ ಆತನನ್ನು ಇಂದ್ರಜಿತುವೆಂದು ಕರೆದರಂತೆ. ಹಾಗಾದರೆ ಸುರರಿಗೆಲ್ಲ ಶ್ರೇಷ್ಠನಾಗುವುದಕ್ಕೂ ಸಾಧ್ಯವಿಲ್ಲ.

ನಿರತತಾನ್ವೈಶ್ವರ್ಯವಂತನಂತೆ, ಇವನ ಸಂಪತ್ತಿಗೆ ಬೆಂಕಿ ಬೀಳಲಿ. ಯಾರಿಗೆ ಬೇಕಿವನ ಸಂಪತ್ತು.? ನಮ್ಮ ಮನೆಯಲ್ಲಿ ಸಂಪತ್ತಿರಲಿಲ್ಲವೆ? ನಮ್ಮ ಅಯೋಧ್ಯೆ, ಸಂಪತ್ತಿನ ಸಾಗರವೇ ಆಗಿರಲಿಲ್ಲವೆ? ಆದ್ದರಿಂದ ಯಾವುದೇ ಸಂಪತ್ತಿಗೆ ಸೂರೆ ಹೋಗುವವಳು ನಾನಲ್ಲ. ಅದರಲ್ಲಿಯೂ ಈ ಲಂಕೆ ಯಾರದ್ದು? ಇವನದ್ದಲ್ಲ. ಇವನಣ್ಣನಾದ ವೈಶ್ರವಣನ ಅಧಿಕಾರಕ್ಕೆ ಒಳಪಟ್ಟಿದ್ದು. ಅಣ್ಣನನ್ನು ಓಡಿಸಿ ಲಂಕೆಯನ್ನು ಸ್ವಾಧೀನ ಪಡಿಸಿಕೊಂಡವ. ತಮ್ಮನಾದ ಭರತನಿಗಾಗಿ ಅಯೋಧ್ಯೆಯನ್ನೇ ಬಿಟ್ಟು ಬಂದ ರಾಮನ ಭ್ರಾತೃಪ್ರೇಮವೆಲ್ಲಿ, ಅಣ್ಣನನ್ನೇ ಓಡಿಸಿ ಲಂಕೆಯನ್ನು ಆಳುವ ಇವನ ಭ್ರಾತೃದ್ರೋಹವೆಲ್ಲಿ?

ಬೇಡ, ಇವನಲ್ಲಿ ಪರಾಕ್ರಮ ಇದ್ದದ್ದು ಹೌದು ಎಂದಾದರೆ ಆ ಹೊತ್ತು ಇವನ ಬಲ ಯಾಕೆ ಪ್ರದರ್ಶಿಸಲ್ಪಡಲಿಲ್ಲ? ನನ್ನ ಸ್ವಯಂವರ ಕಾಲದಲ್ಲಿ ನನ್ನ ತಂದೆ ಜನಕ ಮಹಾರಾಜರು, ನಮ್ಮ ನಿಮಿ ವಂಶದವರಿಗೆ, ಪಾರಿತೋಷಕವಾಗಿ ದೇವತೆಗಳಿಂದ ಕೊಡಲ್ಪಟ್ಟಿದ್ದ ಭಾರವಾಗಿದ್ದ ಶಿವಧನಸ್ಸು, ಅದನ್ನೇ ಪಣವಾಗಿರಿಸಿದರು. ಯಾರು ಎತ್ತಿ ಹೆದೆ ಏರಿಸುತ್ತಾರೊ ಅಂತವರಿಗೆ ತನ್ನ ಮಗಳಾದ ಜಾನಕಿಯನ್ನು ಕೊಡುತ್ತೇನೆಂದು ಪಣ ಸಾರಿದರು. ಹತ್ತು ತಲೆ ಇಪ್ಪತ್ತು ಕೈಗಳನ್ನು ಹೊಂದಿದ್ದ ಈ ಖಳ ರಾವಣ ಅಲ್ಲಿಗೆ ಬಂದಿದ್ದ, ನನ್ನ ಮೇಲಣ ಆಸೆಯಿಂದ ಧನುಸ್ಸನ್ನು ಕೆಲವಷ್ಟು ಎತ್ತರಕ್ಕೆ ಏತ್ತಿದ. ಕಾಲು ಜಾರಿ ಕೈ ತಪ್ಪಿ ಬಿದ್ದಾಗ ಅದರಡಿಯಲ್ಲಿ ಸಿಲುಕಿ ಕಿರುಚಿಕೊಂಡ ರಾವಣ ಇವನೇ ಅಲ್ಲವೇನು? ಆ ಬಳಿಕ, ವಿಶ್ವಾಮಿತ್ರರ ಕೃತುಸಂರಕ್ಷಣಾರ್ಥವಾಗಿ ಸಾಗಿ ಬಂದ ಶ್ರೀರಾಮಚಂದ್ರ, ಸುಬಾಹು ತಾಟಕಿಯರನ್ನು ನಿಗ್ರಹಿಸಿ ಮಾರೀಚನನ್ನೂ ಯೋಜನಾಂತರಕ್ಕೆ ಹಾರಿಸಿ ಅಹಲ್ಯೆಯನ್ನು ಉದ್ಧರಿಸಿ ನಮ್ಮ ಮಿಥಿಲೆಯವರೆಗೆ ಬಂದು ಭಾರವಾಗಿದ್ದ ಶಿವಧನಸ್ಸನ್ನು ಲೀಲಾಜಾಲವಾಗಿ ಎತ್ತಿ ನನ್ನನ್ನು ಮದುವೆಯಾದರು. ಭಾರವಾಗಿದ್ದ ಶಿವಧನಸ್ಸನ್ನು ಎತ್ತಿದ ರಾಮ ದೊಡ್ಡವರೇ ?ಅದರಡಿಯಲ್ಲಿ

ಸಿಲುಕಿ ಕಿರುಚಿಕೊಂಡ ರಾವಣ ದೊಡ್ಡವನೇ? ಯಾರು ದೊಡ್ಡವರು?

ಕಿಷ್ಕಿಂದೆಯಲ್ಲಿ ವಾಲಿ ಒಬ್ಬ ಬಲಿಷ್ಠನಿದ್ದಾನೆ ಎಂದು ಕೇಳಿದ. ಅಲ್ಲಿಗೆ ಹೋದ. ವಾಲಿ ಅಲ್ಲಿ ಇರಲಿಲ್ಲವಂತೆ. ಸಮುದ್ರಸ್ನಾನವನ್ನು ಮುಗಿಸಿ ಅರ್ಘ್ಯ ಜಲವನ್ನು ಹಿಡಿದು ಕುಳಿತಿದ್ದನಂತೆ. ಮುಂಬದಿಯಿಂದ ಹೋಗಿ ಯುದ್ಧಕ್ಕೆ ಕರೆಯದೆ, ಹಿಂಬದಿಯಿಂದ ಹೋಗಿ ವಾಲಿಯನ್ನು ಹಿಡಿದನಂತೆ. ಬಲಿಷ್ಠನಾದ ವಾಲಿ ಇವನನ್ನು ಅಲ್ಲಿಯೇ ಕಂಕುಳಲ್ಲಿ ಅವುಕಿ ಹಿಡಿದು ತನ್ನೆಲ್ಲ ಕೆಲಸ ಕಾರ್ಯಗಳನ್ನು ಮುಗಿಸಿಕೊಂಡ ಬಳಿಕ ಬಾಲದಲ್ಲಿ ಸುತ್ತಿ ಸಮುದ್ರದಲ್ಲಿ ಮುಳುಗಿಸಿ ಏಳಿಸಿ, ಮುಳುಗಿಸಿ ಏಳಿಸಿ ಮಗನಾದ ಅಂಗದನಾಡುವ ತೊಟ್ಟಿಲ ಹುರಿಗೆ ಬಂಧಿಸಿದಾಗ ಪಿಳಿಪಿಳಿ ಕಣ್ಣು ಬಿಟ್ಟ ರಾವಣ ಇವನೇ ಅಲ್ಲವೇನೆ? ಕೈಲಾಸ ಪರ್ವತವನ್ನು ಎತ್ತುವುದಕ್ಕೆ ಹೋಗಿ ಬೆರಳುಗಳು ಪರ್ವತದಡಿಯಲ್ಲಿ ಸಿಲುಕಿ ಕಿರುಚಿಕೊಂಡ ರಾವಣ ಇವನೇ ಅಲ್ಲವೇನೇ? ಇವನೊಬ್ಬ ಹೊಟ್ಟೆ ಕಿಚ್ಚಿನ ಮಾರಿ, ಇವನಿಗೆ ಬಲಿಷ್ಠರಿದ್ದಾರೆ ಎಂದರೆ ಕೇಳಿ ಸಹಿಸುವ ಗುಣವಿಲ್ಲ. ಮಾಹಿಷ್ಮತಿ ದೊರೆಯಾದ ಕೃತವೀರ್ಯಪುತ್ರ ಕಾರ್ತವೀರ್ಯ ಬಲಿಷ್ಠನಾಗಿದ್ದಾನೆ ಅಂತ ಕೇಳಿದ. ಹೋಗಿ ಅವನನ್ನು ಯುದ್ಧಕ್ಕೆ ಕರೆದ. ಇವನಿಗೆ ಇಪ್ಪತ್ತು ತೋಳುಗಳಾದರೆ ಅವನಿಗೆ ಸಾವಿರ ತೋಳುಗಳು ಇವನನ್ನು ಹಿಡಿದು ಬಡಿದು ಕಟ್ಟಿ ಕುಟ್ಟಿ ಮೆಟ್ಟಿ ಕಾರಾಗ್ರಹಕ್ಕೆ ತಳ್ಳಿದಾಗ ಎಷ್ಟೋ ವರ್ಷ ಶಿಕ್ಷೆ ಅನುಭವಿಸಿದನಂತೆ. (ಅಜ್ಜ ಬಿಡಿಸಿದ್ದು), ಹಾಗಾದರೆ ಹೋದಲ್ಲೆಲ್ಲ ಸೋಲೇ ಅನುಭವಿಸಿದ್ದು. ಆದರೂ ನನ್ನ ಎದುರಿನಲ್ಲಿ ಬಲವಿದೆ ಬಲವಿದೆ ಎಂದು ಹೇಳುತ್ತಿದ್ದಾನಲ್ಲ. ಇನ್ನೂ ಅವನಲ್ಲಿ ಬಲವಿದ್ದುದ್ದೇ ಹೌದು ಅಂತಾದರೆ ಆ ದಿವಸ ನನ್ನನ್ನು ಯಾಕೆ ಹಾಗೆ ತರಬೇಕಾಗಿತ್ತು.

ಅಂದು ರಾಮಲಕ್ಷಣರ ರಕ್ಷಣೆಯನ್ನು ಕಳೆದುಕೊಂಡು ಪರ್ಣಕುಟೀರದಲ್ಲಿ ನಾನೊರ್ವಳೇ ಇರುವಾಗ, ವಂಚಿಸಿ ನನ್ನನ್ನು ಕದ್ದು ತಂದನಲ್ಲ. ಧೈರ್ಯವಿದ್ದರೆ ಅಂದು ನನ್ನನು ರಾಮಚಂದ್ರನ ಕಣ್ಣ ಮುಂದೇ ತರಬೇಕಾಗಿತ್ತು, ಹಾಗೆಂದು ಇಲ್ಲಗೇ ಪ್ರಕರಣ ಮುಗಿಯುವುದಿಲ್ಲ. ಮುಂದೊಂದು ದಿನ ನನ್ನ ಮೇಲೆ ಅತಿಯಾದ ಪ್ರೀತಿಯುಳ್ಳ ಶ್ರೀರಾಮಚಂದ್ರ ಇಲ್ಲಿಗೆ ಬಂದೇ ಬರುತ್ತಾರೆ.ಕೆಟ್ಟ ಮೂಳನಿವನ ತಲೆಯನ್ನು ಕುಟ್ಟಿ ಕಾಲೊಳೊದ್ದ ಮೇಲೆ ನನ್ನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗಿ ಪಟ್ಟದರಸಿಯನ್ನಾಗಿ ಮಾಡಿಕೊಂಡು ಅಯೋಧ್ಯೆಯನ್ನು ಆಳುತ್ತಾರೆ.ಅನುಮಾನವೇ ಇಲ್ಲ. ಇಷ್ಟು ಹೇಳಿದರೂ ಸುಮ್ಮನೆ ನಿಂತಿದ್ದಾನಲ್ಲ ಪಿಸುಣರೊಳು ಬಣಗು ರಣಹೇಡಿ----

# ಭೀಷ್ಮ ಪ್ರತಿಜ್ಞೆ - ಯೋಜನಗಂಧಿ

ನಮಸ್ಕಾರ ಸ್ವಾಮಿ,ನನ್ನ ಪರಿಚಯ ಆಗಲಿಲ್ಲವೋ? ಬಹುಷ: ಈ ದಾರಿಯಲ್ಲಿ ನೀವು ಬಂದವರೇ ಅಲ್ಲ ಅಂತ ಕಾಣ್ತದೆ. ಬಂದಿದ್ದೀರಾ? ಹಾಗಾದರೆ ನಾನಿಲ್ಲದಿದ್ದಾಗಲೇ ಬಂದಿರಬೇಕು. ನಾನು ಕಂದರನ ಮಗಳು ಸ್ವಾಮಿ. ಓ ಆ ಕಡೆ ಸಣ್ಣ ಸಣ್ಣ ಗುಡಿಸಲುಗಳು ಕಾಣಿಸುತ್ತವೆಯಲ್ಲಾ ಅವುಗಳಲ್ಲಿ ಕಾಣುಸುವ ದೊಡ್ಡ ಮನೆ ನಮ್ಮದ್ದು. ಕಾರಣ, ಅಂಬಿಗರಿಗೆಲ್ಲ ಅಧಿಪತಿ ನನ್ನಪ್ಪ . ತಂಡಕ್ಕೆ ತಾಂಡೇಲ, ,ಗುಂಪಿಗೆ ಗುರಿಕಾರ ಎಲ್ಲವೂ ಹೌದು. ಅಪ್ಪನಿಗೆ ವಯಸ್ಸಾದ್ದರಿಂದ ಅವರಿಗೆ ಸ್ವಲ್ಪ ವಿಶ್ರಾಂತಿ ನೀಡುವುದಕ್ಕಾಗಿ ನಾನು ದೋಣಿ ನಡೆಸುವುದಕ್ಕೆ ಹೊರಟೆ. ಈಚೆ ಇದ್ದವರನ್ನು ಆಚೆ ಬಿಡುವುದು, ಆಚೆ ಇದ್ದವರನ್ನು ಈಚೆ ಬಿಡುವುದು ಒಟ್ಟಾರೆ ಆಚೆ ಈಚೆ ಮಾಡುವುದೇ ನಮ್ಮ ಜೀವನ. ಓಹೋ ಏನು ಸ್ವಾಮಿ. ನಿಮ್ಮ ಮೂಗಿನ ಹೊರಳೆ ಅರಳಿದೆಯಲ್ಲಾ! ಏನು ಪರಿಮಳ, ಘಮಘಮಿಸುವ ಪರಿಮಳ ನನ್ನ ಮೈಯಿಂದಲೇ ಹೊರಟ್ಟಿದ್ದು ಸ್ವಾಮಿ. ಮೊದಲು ನನ್ನ ಮೈ ದುರ್ಗಂಧ ಮಿಶ್ರಿತವಾಗಿತ್ತು. ನೀವು ಮೂಗು ಮುಚ್ಚಿಕೊಳ್ಳಬೇಕಿತ್ತು. ಹೀಗೆ ಬದಲಾಗುವುದಕ್ಕೆ ಕಾರಣ ಇದೆ. ಒಂದು ದಿನ ಅಪ್ಪನಿಗೆ ವಿಶ್ರಾಂತಿ ಕೊಡುವುದಕ್ಕಾಗಿ, ದೋಣಿ ನೆಡೆಸುವುದಕ್ಕೆ ನಾನು ಬಂದೆ, ಆದಿನ ಯಾರೂ ಒಬ್ಬರು ಮಹರ್ಷಿಗಳು ಬಂದರು ಆಚೆ ಹೋಗಬೇಕು ಅಂತ ಹೇಳಿದರು. ನಾನಿರುವುದೇ ನಿಮಗಾಗಿ ಏರಿ ದೋಣಿ ಎಂದೆ. ಕುಳಿತರು. ಆಗಲೇ ನನ್ನನ್ನು ನೋಡುತ್ತಲ್ಲೇ ಇದ್ದರು. ನಾನು ನನ್ನ ಕೆಲಸ ಮಾಡುತ್ತಲೇ ಇದ್ದೆ. ದೋಣಿ ಸಾಗುತ್ತಲೇ ಇತ್ತು. ದಡ ಬಿಟ್ಟು ದೋಣಿ ಸ್ವಲ್ಪ ದೂರ ಹೋದಾಗ ಮಹರ್ಷಿಗಳು ನನ್ನನ್ನು ನೋಡಿ ಮುಗುಳು-ಮುಗುಳು ನಗಾಡಿದರು. ನೀನು ಬಹಳ ಚಂದ ಇದ್ದೀಯಲ್ಲಾ ಎಂದರು. ದೇವರು ಕೊಟ್ಟ ಸೌಂದರ್ಯ ಸ್ವಾಮಿ ಎಂದೆ. ಅವರು ಆಕರ್ಷಿತರಾಗಿದ್ದಾರೆ ಎಂದು ನನಗೆ ತಿಳಿಯಿತು.ಎದ್ದು ನಿಂತ ಮಹರ್ಷಿಗಳು ನನ್ನನ್ನು ತಬ್ಬಿಕೊಂಡರು. ನಾಚಿಕೆಯಿಂದ ತಲೆ ತಗ್ಗಿಸಿದೆ. ಪ್ರತಿಮಾತನ್ನಾಡುವುದಕ್ಕಿಲ್ಲ, ಮಹರ್ಷಿಗಳು. ಆಗ ನನ್ನ ಮೈ ಸತ್ತ ಒಣಕು ಮೀನಿನ ವಾಸನೆ ಬರುತ್ತಿತ್ತು. ಏನು ಇಷ್ಟ ಚಂದ ಇದ್ದಿ ಮೈ ಮಾತ್ರ ದುರ್ಗಧದಿಂದ ಕೂಡಿದೆಯಲ್ಲಾ ಎಂದು ಕೇಳಿದರು.ನನ್ನ ಪ್ರಾರಬ್ಧ ಎಂದು ಹೇಳಿದೆ. ಆಗ ಮಹರ್ಷಿಗಳು ನಿನ್ನ ಮೈಯ ದುರ್ಗಂಧ ದೂರವಾಗಲಿ, ನಿನ್ನ ಮೈ ಪರಿಮಳ ಯೋಜನಾಪರ್ಯಂತ ಹಬ್ಬುವಂತಾಗಲಿ . ಎಂದು ಹರಸಿದರು. ಆ ಹೊತ್ತಿನಿಂದ ಮತ್ಸ್ಯಗಂಧಿ ಎಂದು ಕರೆಯಲ್ಪಡುತ್ತಿದ್ದ ನಾನು “ಯೋಜನಾಗಂಧಿ” ಎಂದು ಖ್ಯಾತಳಾದೆ. ಪ್ರಕರಣ ಅಲ್ಲಿಗೆ ಮುಗಿಯಲಿಲ್ಲ ಹೊಳೆಯ ಮಧ್ಯದಲ್ಲಿದ್ದೇವೆ. ಆಚೆ ದಡಕ್ಕೂ ತೋರುತ್ತದೆ.ಈಚೆ ದಡಕ್ಕೂ ತೋರುತ್ತದೆ ನನಗೊಂದು ರೀತಿಯ ಭಯ. ತಪಸ್ಸಿನ ಪ್ರಭಾವ ನೋಡಿ, ಒಂದು ರೀತಿಯಲ್ಲಿ ಮೋಡ ಮುಸುಕುವ ಹಾಗೆ ಮಾಡಿದರು. ಆಚೆ ದಡಕ್ಕೂ ತೋರುವುದಿಲ್ಲ ಈಚೆ ದಡಕ್ಕೂ

ತೋರುವುದಿಲ್ಲ ಭರವಸೆಯಿಂದ ಬಿಗಿದಪ್ಪಿ ಮಹರ್ಷಿಗಳು ನನ್ನನ್ನು ಸೇರಿಯೇ ಬಿಟ್ಟರು. . ಅದೇನೋ ಸದ್ಯೋಜಾತತ್ವ, ಸದ್ಯೋಗರ್ಭ ಎಂದೆಲ್ಲಾ ಹೇಳಿದರು. ನನಗದೆಲ್ಲ ಅರ್ಥವಾಗಲಿಲ್ಲ. ಆದರೆ ಆಕ್ಷಣಕ್ಕೆ ಒಂದು ಮಗುವಿನ ತಾಯಿ ಆದದ್ದಂತೂ ಸತ್ಯ. ಅವನು ತಂದೆಯಂತೆ ಕಮಂಡಲ ಹಿಡಿದಿದ್ದ ಜಟಾವಲ್ಕಲ ದಾರಿಯಾಗಿದ್ದ ಅವನಿಗೊಂದು ನಾಮಕರಣವೂ ಆಯಿತು. ದ್ವೀಪ ಮಧ್ಯದಲ್ಲಿ ಹುಟ್ಟಿದ್ದರಿಂದ ದ್ವೈಪಾಯನ. ಕಪ್ಪು ಬಣ್ಣದಿಂದ ಕೂಡಿದ್ದರಿಂದ ಕೃಷ್ಣ. ಹೀಗೆ ಕೃಷ್ಣ ದ್ವೈಪಾಯನ ಎಂದು ಅವನ ಹೆಸರು. "ಬದರಿಕಾಶ್ರಮಕ್ಕೆ ಹೋಗುತ್ತೇನೆ. ಕರೆದಾಗ ಬರುತ್ತೇನಮ್ಮ" ಎಂದು ಹೊರಟು ಹೋದ. ಈ ಕಡೆಯಿಂದ ಮಹರ್ಷಿಗಳೂ ಹೊರಟು ನಿಂತಿದ್ದಾರೆ. ನನ್ನ ಕಥೆಯೆನು? ಎಂದು ಕೇಳಿದಾಗ ನಿನಗೆ ಮರಳಿ ಕನ್ಯತ್ವವನ್ನು ಅನುಗ್ರಹಿಸಿದ್ದೇನೆ, ಮುಂದೆ ವೀರಯೋಧನ ಹೆಂಡತಿಯಾಗಿ ನಿನ್ನ ಜನ್ಮ ಸಾರ್ಥಕ ಪಡಿಸಿಕೊ ಎಂದು ಹೇಳಿ ಹೊರಟು ಹೋದರು. ಆಚೆ ದಡದಿಂದ ಈಚೆ ದಡಕ್ಕೆ ಬರುವುದರೊಳಗೆ ಒಂದು ಮಗುವಿನ ತಾಯಿ. ಕ್ಷಣಾರ್ಧದಲ್ಲಿ ನಡೆದು ಹೋದ ಘಟನೆ ಮನೆಗೆ ಬಂದಾಗ ಅಪ್ಪ ಪರಿಮಳವೇನು ಎಂದು ಕೇಳಿದರು. ಮಹರ್ಷಿಗಳ ಅನುಗ್ರಹ ಅಂತ ಹೇಳಿ ಸುಮ್ಮನುಳಿದೆ. ಇವತ್ತು ಯಾರೂ ಇಲ್ಲ ಬೇಸರವಾಗುತ್ತಿದೆ. ಹೀಗೆ ಒಂದಷ್ಟು ಸುತ್ತಾಡಿ ಬರುತ್ತೇನೆ.

## ಭೀಷ್ಮ ವಿಜಯ – ಅಂಬೆ

ತಂಗಿಯಂದಿರೆ, ಪರಮ ಪವಿತ್ರವಾದುದು ನಮ್ಮ ಕಾಶೀ ಕ್ಷೇತ್ರ, ವಿಶಾಲವಾದ ವಿಶ್ವದ ಮೇಲೆ ಈಶ್ವರತ್ವವನ್ನು ಇರಿಸಿದ ವಿಶ್ವೇಶ್ವರನ ದಿವ್ಯ ಸಾನ್ನಿಧ್ಯ. ಕಪಿಲ ಮಹರ್ಷಿಯ ನೇತ್ರಾಗ್ನಿಯಿಂದ ದಗ್ಧರಾದ ಸಗರ ಪುತ್ರರನ್ನು ಉದ್ಧರಿಸಲೋಸುಗ ದೇವಲೋಕದಿಂದ ಹರಿದು ಬಂದ ಗಂಗಾ ದೇವಿ ಇಲ್ಲಿಯೇ ಪ್ರವಹಿಸುತ್ತಿದ್ದಾಳೆ. ಶಿವನು ನೆಲೆಸಿರುವುದರಿಂದ ಪುಣ್ಯಕ್ಷೇತ್ರ, ಗಂಗೆಯು ಪ್ರವಹಿಸುತ್ತಿರುವುದರಿದ ತೀರ್ಥ ಕ್ಷೇತ್ರ. ಆದ್ದರಿಂದಲೇ ಸರ್ವ ಯಾತ್ರಾ ಕ್ಷೇತ್ರಗಳಲ್ಲಿ ನಮ್ಮ ಕಾಶಿಯೇ ಸರ್ವೋತ್ಕೃಷ್ಟವೆಂದು ಪರಿಗಣಿಸಲ್ಪಟಿದೆ. ಇಂತಹ ಪವಿತ್ರ ಪ್ರದೇಶದ ಪ್ರಭು ಪ್ರತಾಪಸೇನ ಭೂಪತಿಗಳು, ಕ್ಷೇತ್ರಾಧಿಕಾರಿಗಳು, ಧರ್ಮಾಧಿಕಾರಿಗಳು. ಮಿಕ್ಕುಳಿದ ಎಲ್ಲಾ ಸಂಪತ್ತನ್ನು ಜೀವನದಲ್ಲಿ ಹೊಂದಿದ್ದರೂ ಸಂತಾನದ ಸತ್ಫಲವನ್ನು ಕಾಣದೆ ದುಃಖಿತರಾಗಿದ್ದರಂತೆ. ಮಕ್ಕಳಿಲ್ಲದ ಮನೆ, ನೆಂಟರಿಲ್ಲದ ದೇಶ, ಮೂರ್ಖ ಮನಸ್ಸು ಇವೆಲ್ಲ ನಿಷ್ಪ್ರಯೋಜಕವಾದವುಗಳು. ಮಕ್ಕಳು ಮನೆಗೆ ಚೆಂದ, ಗುಡಿಗೆ ಮೂರ್ತಿಯೇ ಅಂದ. ಮಕ್ಕಳಿಲ್ಲದ ನನ್ನ ಬಾಳು ಹಾಳು ಎಂದು ಭಾವಿಸಿ ಮಕ್ಕಳು ಬೇಕೆಂದು ಶಿವನನ್ನು ಬಿಡದೆ ಪ್ರಾರ್ಥಿಸಿದರಂತೆ. ಯಜ್ಞ– ಯಾಗ, ಹೋಮ– ಹವನ ವ್ರತ ನಿಯಮ ಇತ್ಯಾದಿಗಳಿಂದ ಕಾಲ ಕಳೆದರಂತೆ. ಅದರ ಪುಣ್ಯದ ಫಲವೋ ಎಂಬಂತೆ ಮೂರು ಮಂದಿ ಹೆಣ್ಣು ಮಕ್ಕಳು ಹುಟ್ಟಿಕೊಂಡೆವು. ಅಂಬೆ, ಅಂಬಿಕೆ, ಅಂಬಾಲಿಕೆ ಎಂದು ಹೆಸರಿಟ್ಟು ಮುದ್ದಿನಿಂದ ಬೆಳೆಸಿದರು, ಬೆಳೆದೆವು. ಶೈಶವವನ್ನು ಕಳೆದೆವು. ಯೌವನದ ಹೊಸ್ತಿಲಿಗೆ ಕಾಲಿಟ್ಟಿದ್ದೇವೆ. ನಮ್ಮ ಮದುವೆಯ ಮಂಗಳಕಾರ್ಯವನ್ನು ಕಂಡು ಕನ್ಯಾದಾನದಿಂದ ಕೃತಾರ್ಥರಾಗಬೇಕೆಂದು ನಮ್ಮ ತೀರ್ಥರೂಪರು ಹಾರೈಸುತ್ತಿದ್ದಾರೆ. ಯಾವುದಕ್ಕೂ ಕಾಲ ಕೂಡಿ ಬರಬೇಕಲ್ಲಾ. ಕಾಲ ಕೂಡಿ ಬರಲಿ ಎಂದು ನಮ್ಮಪ್ಪ ಏನೂ ಕೈಕಟ್ಟಿ ಕುಳಿತುಕೊಳ್ಳಲಿಲ್ಲ. ಈಗಾಗಲೇ ಕಾರ್ಯೋನ್ಮುಖರಾಗಿದ್ದಾರೆ. ವಿವಾಹಕ್ಕೆ ಪಣವನ್ನು ಇಟ್ಟಿದ್ದಾರೆ. ಎಲ್ಲ ಅರಸುಕುವರರನ್ನು ಕಾಶಿಗೆ ಕರೆಸಿಕೊಂಡು ಅವರವರಲ್ಲಿ ಯುದ್ಧವನ್ನು ಏರ್ಪಡಿಸಿ ಎಲ್ಲವರನ್ನು ಯಾವಾತ ಗೆಲ್ಲುತ್ತಾನೋ ಅಂತವನಿಗೆ ನಾವ್ ಮೂರು ಮಂದಿಯನ್ನು ಮದುವೆ ಮಾಡಿಕೊಡುತ್ತೇನೆಂದು ಪಣ ಸಾರಿದ್ದಾರೆ. ಧರಣಿಪಾಲಕರು ಅತ್ತಣಿಂದ ಇತ್ತಣಿಂದ ಬರುತ್ತಿದ್ದಾರೆ ಕಾಶಿಯ ಕಡೆಗೆ. ಭವಿಷತ್ತಿನಲ್ಲಿ ನಾವು ಮೂರು ಮಂದಿ ಒರ್ವ ವೀರನ ಹೆಂಡತಿಯಾಗಿ ಒಂದೇ ಮನೆಯಲ್ಲಿ ಸುಖದಿಂದ ಬದುಕಲಿದ್ದೇವೆ. ಸುತ್ತ ಮುತ್ತ ಇದ್ದ ಹೆಂಗಸರು ನಾಳೆ ನೀವೆಲ್ಲಿಯೂ ನಾವೆಲ್ಲಿಯೂ, ಆದ್ದರಿಂದ ಸಿಕ್ಕಿದ ಈ ಸಮಯದಲ್ಲಿ ಜಲ ಕ್ರೀಡೆಗೆ ವನ ವಿಹಾರಕ್ಕೆ ಹೋಗಿ ಬರೋಣವೆಂದು ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ಗಂಗಾ ತೀರಕ್ಕೆ ಜಲಕ್ರೀಡೆಗೆ ಹೋಗೋಣ.

ಮರುಳೆ ನಾನಾಗಿರ್ಪೆ--------

ಶಿವನೆ, ಕೇಳುವವರಿಲ್ಲದ ಒಡವೆಯಾದೆ, ಕಾಯುವವರಿಲ್ಲದ ನಿರ್ಗತಿಕಳಾದೆ. ಕಣ್ಣು ಕಟ್ಟಿ ಕಾಡಿನಲ್ಲಿ ಬಿಟ್ಟಂತಿದೆ. ಇಂತಹ ದುರ್ಗತಿಯ ದುಷ್ಕೂಪಕ್ಕೆ ತಳ್ಳಲ್ಪಡುತ್ತೇನೆಂದು ಕನಸು ಮನಸ್ಸಿನಲ್ಲಿಯೂ ನಾನೆಣಿಸಿರಲಿಲ್ಲ. ಇಂತಹ ದುಃಸ್ಥಿತಿ ನನಗೆ ಬರುವುದಕ್ಕೆ ಕಾರಣರಾರು? ನನ್ನ ಮರುಳುತನ. ನನ್ನ ಹುಚ್ಚುತನ. ಏರುತ್ತಿರುವ ಯೌವನ ಸೇರುತ್ತಿರುವ ರಕ್ತ, ಪ್ರಾಯ ಪ್ರಬುದ್ಧರಾದಂತಹ ನಾನೋ ನನ್ನಂತವರೋ ದಾರಿ ತಪ್ಪುತ್ತೇವೆ. ಪುರುಷನ ಮಧುರವಾದ ಮಾತನ್ನು ಕೇಳಿ, ಅವ ಆಡಿದ ಮಾತನ್ನೆಲ್ಲ ಸತ್ಯವೆಂದು ನಂಬಿ ಮೋಸ ಹೋಗುತ್ತೇವೆ. ನಮ್ಮನ್ನು ನಂಬಿಸಿ ವಂಚಿಸುತ್ತಾರೆ, ದುರುಳ ಪುರುಷರು. ಆ ಸಂದರ್ಭ ವಿಷಪ್ರಾಶನ ಮಾಡಿಯೋ, ಬಾವಿಗೆ ಹಾರಿಯೂ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಅದಕ್ಕೆ ಅವರವರ ಮರುಳುತನವೇ ಕಾರಣ. ಇದು ನನ್ನ ಮರುಳುತನ.ಉದ್ಯಾನದಲ್ಲಿ ಸಾಲ್ವನನ್ನು ಕಂಡೆ. ಅವನ ಮಧುರವಾದ ಮಾತಿಗೆ ಮನಸೋತೆ. ಅವ ಆಡಿದ ಮಾತನ್ನೆಲ್ಲಾ ಸತ್ಯವೆಂದು ನಂಬಿದೆ. ಅವನಿಗಾಗಿ ಸೌಭಕ್ಕೆ ಹೋದರೆ ವ್ಯಚಾರಿಣಿ ಎಂದು ಸಂಬೋದಿಸಿದ. ಇದಕ್ಕಿಂತ ಆಘಾತ ಮತ್ತೊಂದುಂಟೆ? ಇದು ನನ್ನ ಮರಳುತನವಲ್ಲವೇ? ಅಲ್ಲ ಖಂಡಿತ ಮರುಳುತನವಲ್ಲ. ನನ್ನ ತಪ್ಪಿಲ್ಲ ಇದರಲ್ಲಿ ಸಾಲ್ವನೇ ಮೂರ್ಖ. ನೀನಿಲ್ಲದೇ ಬದುಕಿಲ್ಲ ಅಂತ ಹೇಳಿದ ಭ್ರಷ್ಟ. ನೀನೆ ನನ್ನ ಸರ್ವಸ್ವ ಎಂದು ಆಡಿದ ಅಯೋಗ್ಯ. ಅವನಿಗಾಗಿ ಸೌಭ ದೇಶಕ್ಕೆ ಹೋದರೆ ನನ್ನನ್ನು ತಿರಸ್ಕರಿಸಿದನಲ್ಲ ಮೂರ್ಖ. ಅವ ಸತ್ತೇ ಹೋಗಲಿ, ಹಾಳಾಗಿ ಹೋಗಲಿ. ಛೇ ಅವನನ್ನ್ಯಾಕೆ ಶಪಿಸಬೇಕು. ಇದರಲ್ಲಿ ಅವನದ್ದೇನು ತಪ್ಪಿದೆ. ಖಂಡಿತಾ ಅವ ನನ್ನನ್ನು ಮದುವೆಯಾಗುತ್ತಿದ್ದ. ಎಲ್ಲವರನ್ನೂ ಗೆದ್ದು ನಲಿದಾಡುತ್ತಿದ್ದ ಸಾಲ್ವ ಆಸೆಯ ಕಂಗಳಿಂದಲೇ ನನ್ನನ್ನು ಕಾಣುತ್ತಿದ್ದ. ಆ ಹೊತ್ತಿಗೆ ಆ ಅಯೋಗ್ಯ ಹಸ್ತಿನಾವತಿಯ ಭೀಷ್ಮ, ಅಲ್ಲಿಗೆ ಬರಬೇಕಾಗಿತ್ತೇ? ನಮ್ಮನ್ನು ಎತ್ತಿ ಹಸ್ತಿನಾವತಿಗೆ ತರಬೇಕಾಗಿತ್ತೇ? ಮದುವೆಯಾಗದೇ ಇರುವ ಭೀಷ್ಮ ಅಲ್ಲಿಗೆ ಯಾಕೆ ಬರಬೇಕಾಗಿತ್ತು. ತಮ್ಮನಿಗಾಗಿ ಅಂತೆ. ತಮ್ಮನೇನು ಕುಂಟನೇ, ಕುರುಡನೇ, ಕಿವುಡನೇ, ಮೂಕನೇ ಅಥವಾ ಅಂಗವಿಹೀನನೇ? ಅವನೇ ಬರಬಹುದಾಗಿತ್ತಲ್ಲ? ಅವನು ಬಾರದೆ ಭೀಷ್ಮ ಯಾಕೆ ಬಂದ? ಹಾಗಾದರೆ ತಪ್ಪಿತಸ್ಥರು ಯಾರು? ಇಲ್ಲಿ ನನ್ನಪ್ಪನ ತಪ್ಪಿಲ್ಲ. ಸಾಲ್ವನು ನಿರಪರಾಧಿ. ವಿಧಿಯನ್ನು ಪ್ರಶ್ನಿಸುವುದಿಲ್ಲ. ಇದಕ್ಕೆಲ್ಲ ಮೂಲ ಕಾರಣ ಭೀಷ್ಮನೇ ನಾನು ಪ್ರಶ್ನಿಸಬೇಕಾದ್ದು ಭೀಷ್ಮನನ್ನು. ಆದ್ದರಿಂದ ಹಸ್ತಿನಾವತಿಗೆ ತೆರಳುತ್ತೇನೆ.

ತೊತ್ತಿದಲ್ಲವೊ---

( ರಣಕಣದಿಂದ ನಿರ್ಗಮಿಸಿದ ಪರಶುರಾಮರನ್ನು ಕಾಣುತ್ತಾ) ಹೋಗಿ, ಹೋಗಿ, ನಿಮ್ಮ ಅವಶ್ಯಕತೆ ಇಲ್ಲ. ನನಗೆ ನ್ಯಾಯ ಕೊಡಿಸುತ್ತೇನೆ, ಕುರುಕ್ಷೇತ್ರದಲ್ಲಿ ಭೀಷ್ಮನೊಟ್ಟಿಗೆ ಮದುವೆ ಮಾಡಿಸುತ್ತೇನೆ. ಅವನು ಒಪ್ಪದಿದ್ದರೆ ಅವನಿಗೆ ಶಿಕ್ಷೆ ವಿಧಿಸುತ್ತೇನೆಂದು ಕರೆದುಕೊಂಡು ಬಂದವರು. ಈಗ ಏನು "ಪರಮ ಶಿಷ್ಯನೆ ನಿನ್ನಧುರಕೆ ಮೆಚ್ಚಿದೆ". ನಿಮ್ಮ ಬಾಯಿಂದ

ಇದನ್ನು ಕೇಳುವುದಕ್ಕೆ ನಿಮ್ಮನ್ನು ಕರೆದುಕೊಂಡು ಬಂದದ್ದಾ? ಭೀಷ್ಮ, ಆಚಾರ್ಯರು ಹೋದರೇನಂತೆ ನಾನಿದ್ದೇನೆ, ಯುದ್ಧಕ್ಕೆ ಸಿದ್ದನಾಗು. ಹಾ! ಯುದ್ದ ಮಾಡುವುದಿಲ್ಲ? ಹಾಗಾದರೆ ಇನ್ನು ಮುಂದೆ ಈ ಪ್ರಪಂಚದಲ್ಲಿ ಬದುಕುವುದೂ ಇಲ್ಲ ನಾನು? ಆದರೆ ಒಂದು ಮಾತನ್ನು ಮಾತ್ರ ನೆನಪಿಟ್ಟುಕೋ? ಕಾಶೀಶ ಪ್ರತಾಪಸೇನ ನಮ್ಮನ್ನು ಪ್ರೀತಿಯಿಂದ ಎತ್ತಿ ಸಾಕಿದ್ದು, ನಿನ್ನ ಮನೆಯಲ್ಲಿ ದಾಸಿಯಾಗಿ ಬದುಕುವುದಕ್ಕಲ್ಲ. ನಿಮ್ಮ ವಂಶದ ಉದ್ಧಾರವನ್ನೇ ಗುರಿಯಾಗಿಟ್ಟುಕೊಂಡು ತಂದು ನಮ್ಮ ಜೀವನವನ್ನೇ ಹಾಳುಮಾಡಿದೆ! ಯಾವುದೇ ವಿಧಾನದಿಂದ ನಿನ್ನನ್ನು ಗೆಲ್ಲುವುದಕ್ಕೆ ಕೊಲ್ಲುವುದಕ್ಕೆ ಸಾಧ್ಯವಿಲ್ಲವೆಂದು ಮನವರಿಕೆಯಾಗಿದೆ. ಆದ್ದರಿಂದ ಇಲ್ಲಿಯೇ ಅಗ್ನಿ ಪ್ರವೇಶ ಮಾಡುತ್ತೇನೆ. ಸತ್ತಲ್ಲಿಗೆ ಅಂಬೆಯ ಕಥೆ ಮುಗಿಯಿತೆಂದು ಭಾವಿಸಬೇಡ. ಸಾಯುವ ಕೊನೆಯ ಗಳಿಗೆಯಲ್ಲಿಯೂ ನನ್ನ ಮನದಲ್ಲಿ ಒಂದು ಆಸೆ ಇದೆ. ಮದುವೆಯಾಗುವ ಆಸೆ ಇಲ್ಲ. ಆಭರಣ ತೊಟ್ಟು ಅಲಂಕಾರ ಮಾಡಿಕೊಳ್ಳುವ ಆಸೆ ಅಲ್ಲ. ನಿನ್ನ ಸಾವನ್ನು ಕಾಣುವ ಆಸೆ. ನೆತ್ತರ ಲಿಪಿಯೊಳಗೆ ಬರೆದಿಡು. ಮತ್ತೊಂದು ಜನ್ಮವ ತಳೆದು ಬರುವೆ. ವ್ಯಕ್ತಿ ಸಾಯುವಾಗ ಯಾವ ಆಸೆಯನ್ನು ಹೊಂದಿರುತ್ತಾನೋ ಅದೇ ಕರ್ಮಶೇಷವೆನ್ನಿಸಿಕೊಂಡು ಮುಂದಿನ ಜನ್ಮಕ್ಕೆ ಕಾರಣವಾಗುತ್ತದಂತೆ. ನಿನ್ನ ಸಾವನ್ನು ಕಾಣಬೇಕೆನ್ನುವ ಆಸೆಯನ್ನು ಹೊತ್ತು ಸಾಯುವ ನಾನು ಖಂಡಿತಾ ಮತ್ತೊಂದು ಜನ್ಮವನ್ನು ತಳೆದು ಬರುತ್ತೇನೆ. ಆಗ ಎತ್ತ ಹೋದರೂ ಬಿಡೆನು ನಿನ್ನನು ಹೆತ್ತ ನಿನ್ನಮ್ಮನ ಒಡಲನ್ನು ಸೇರಿದರು ಬಿಡಲಾರೆ. ನಿನ್ನ ನಾಶಕ್ಕೆ ನಾನೇ ಕಾರಣಳಾಗುತ್ತೇನೆ. ಭೀಷ್ಮ ನಿನ್ನ ವಂಶದ ಉದ್ಧಾರವಾಗಬೇಕೆ? ಸಾಯುವುದಕ್ಕೆ ಹೊರಟ ಅಂಬೆ ಕೊಡುವ ಶಾಪ, ನಿನ್ನ ವಂಶ ಕ್ಷಯವಾಗಿ ಹೋಗಲಿ, ನಿನ್ನ ವಂಶ ಕ್ಷಯವಾಗಿ ಹೋಗಲಿ. ಇಗೋ ನಿನ್ನ ವಂಶದ ನಾಶಕ್ಕೆ ನಾಂದಿ ನನ್ನ ಈ ಶಾಪ. ಇದೋ ಅಗ್ನಿಯಲ್ಲಿ ಪ್ರವೇಶಿಸುತ್ತೇನೆ. ಪ್ರಾಯ ಪ್ರಬುದ್ದೆಯಾದ ಅಂಬೆ ಬೆಂಕಿಯಲ್ಲಿ ಬಿದ್ದು ಕರಟಿ ಸುರುಟಿ ಮುರುಟಿ ವಿಲವಿಲ ಒದ್ದಾಡಿ ಸಾಯುವ ದುರಂತ ದೃಶ್ಯವನ್ನು ನೋಡಿ ನೀ ನಗು ಭೀಷ್ಮ. ನೀ ನಗು. ಇಲ್ಲ ಸಾಯುವುದಕ್ಕೆ ಹೊರಟ ನಾನ್ಯಾಕೆ ಅಳಬೇಕು. ನಾನೂ ನಗುತ್ತೇವೆ.(ಗಹಗಹಿಸಿ ನಗು)

## ಕೀಚಕ ವಧೆ ಸೈರಂಧ್ರಿ

ಎಲ್ಲವೂ ಕಾಲಾಧೀನವೇ ಹೊರತು ಕಾಲ ನಮ್ಮಾಧೀನವಲ್ಲ. ಕಾಲದ ಪ್ರಭಾವಕ್ಕೆ ಸಿಕ್ಕಿದಾಗ ಮೇಲು ಕೀಳಾಗುತ್ತದೆ,ಕೀಳು ಮೇಲಾಗುತ್ತದೆ. ಬಡವ ಬಲ್ಲಿದನಾಗುತ್ತಾನೆ. ಎಳೆಗುರುವು ಎತ್ತಾಗುತ್ತದೆ. ಎಂಬ ನೀತಿ ಪ್ರಭೋಧಕನಾದ ಕವಿಸೂಕ್ತಿ ಶತಾಂಶ ಸತ್ಯ. ಇದಕ್ಕೆ ಸ್ಪಷ್ಟ ಸಾಕ್ಷಿ ಪಾಂಡವರ ಜೀವನ. ಒಂದು ಕಾಲದಲ್ಲಿ ರಾಜಸೂಯಾಧ್ವರವನ್ನು ಮಾಡಿ ಲೋಕವಿಖ್ಯಾತರಾದ ಪ್ರಖ್ಯಾತರಾದ ಪಾಂಡವರು, ಹೆತ್ತ ತಾಯಿಯನ್ನು ನಂಬಿದ ನೆಂಟರನ್ನು ಸಂರಕ್ಷಿಸಲಾರದ ದುಸ್ಥಿತಿಗೆ ಒಳಗಾದರು. ರಾಜ್ಯ, ಬೊಕ್ಕಸ, ಭಂಡಾರ ಎಲ್ಲವನ್ನು ಕಳೆದುಕೊಂಡು ಕಾಡುಪಾಲಾದರು. ಇದಕ್ಕೆ ಕಾರಣವಾದದ್ದು ಕೇವಲ ಕೆಟ್ಟ ದ್ಯೂತ. ದ್ಯೂತವು, ದುರ್ವ್ಯಸನವೆಂಬುದನ್ನು ತಿಳಿದಿದ್ದರೂ ಧರ್ಮರಾಜರು ದ್ಯೂತಾಸಕ್ತರಾದರು. ಅದರ ಪರಿಣಾಮವಾಗಿಯೇ ಸರ್ವಸ್ವವನ್ನು ಕಳೆದುಕೊಂಡರು. ದ್ಯೂತಕ್ಕೆ, ಧುರಕ್ಕೆ ಕರೆದಾಗ ಬರುವುದಿಲ್ಲವೆಂದು ಹೇಳುವವನು ಕ್ಷತ್ರಿಯನೇ ಅಲ್ಲವೆಂದು ಛಲವಿಡಿದು ದ್ಯೂತವಾಡಿದರು. ಕೆಲವೊಮ್ಮೆ ವಿಚಾರವಂತರು ವಿವೇಕಿಗಳ ಬದುಕಿನಲ್ಲಿ ಇಂತಹ ಅಘಟಿತ ಘಟನೆಗಳು ನಡೆದುಹೋಗುವುದು ಅಲ್ಲೊಂದು ಇಲ್ಲೊಂದು ಹುಡುಕಿದರೆ ಕಾಣಸಿಗುತ್ತದೆ. ಪುಲಸ್ಯ ಬ್ರಹ್ಮನ ಪೌತ್ರನಾಗಿದ್ದರೂ ರಾವಣನು ಪರಧಾರಾ ಅಪಹರಣದಲ್ಲಿ ದೋಷವನ್ನು ತಿಳಿಯಲಿಲ್ಲ. ಬಂಗಾರವರ್ಣದ ಮೃಗ ಭೂಮಿಯ ಮೇಲಿರದೆಂದು ತಿಳಿದಿದ್ದರೂ ರಘರಾಮ ಚಂದ್ರನು ತನ್ನ ಮಡದಿಯ ಮನದಾಸೆಯನ್ನು ಈಡೇರಿಸುವಲ್ಲಿ ಚಪಲ ಚಿತ್ತನಾದ. ಧರ್ಮರಾಯರು ದ್ಯೂತಾಸಕ್ತರಾದರು. ಆದ್ದರಿಂದಲೇ ನಾವೆಲ್ಲ 12 ವರ್ಷ ವನವಾಸ 1 ವರ್ಷ ಅಜ್ಞಾತವಾಸವೆಂಬ ಕಟ್ಟುಕಟ್ಟಳೆಗೆ ಒಳಪಟ್ಟು ಕಾಂತಾರವನ್ನು ಸೇರಿದೆವು. ಆದರೂ ಇಲ್ಲಿ ಒಂದು ಸಮಾಧಾನ ನಮಗಿದೆ. ರಾಜ್ಯ ಸಂಪತ್‌ಸರ್ವಸ್ವವನ್ನು ಕಳೆದುಕೊಂಡರೇನಂತೆ, ನಿಸರ್ಗ ಸಹಜವಾದ ಸುಂದರ ತಾಣದಲ್ಲಿ ಋಷಿಮುನಿಗಳ ಪೂರ್ಣಾನುಗ್ರಹಕ್ಕೆ ಪಾತ್ರರಾದೆವು. ಅಸ್ತ್ರ – ಶಸ್ತ್ರಾದಿ ಸಂಪತ್ ಸಂಗ್ರಹಣೆಯೊಂದಿಗೆ ಬಲಿಷ್ಠರಾದೆವು. 12 ವರ್ಷವನ್ನು 12 ದಿನಗಳಂತೆಯೇ ಕಳೆದೆವು. ಒಂದು ವರ್ಷದ ಅಜ್ಞಾತದ ಅವಧಿಯನ್ನು ಕಳೆಯುವುದಕ್ಕೆ ವಿರಾಟ ನಗರಿಯೇ ನಮಗನುಕೂವಾದ ಪ್ರದೇಶವೆಂದು ಆರಿಸಿಕೊಂಡೆವು. ಒಬ್ಬೊಬ್ಬರು ಒಂದೊಂದು ವೃತ್ತಿಯನ್ನು ಮಾಡಿ ಒಂದೊಂದು ಹೆಸರಿನಿಂದ ಇರುವುದೆಂದು ತೀರ್ಮಾನವಾಯ್ತು. ಒಬ್ಬೊಬ್ಬರೇ ಬೇರೆ ಬೇರೆಯಾಗುತ್ತಿರುವಾಗ ಈ ಸಂಕಷ್ಟ ಸಹಿಸಲು ನನಗೆ ಸಾಧ್ಯವಾಗುತ್ತಿಲ್ಲ. ಶತಯಾಗಾರ್ಜಿತ ಪುಣ್ಯಫಲ ಸ್ವರೂಪನಾಗಿ ಇಂದ್ರ ಪಟ್ಟವನ್ನೇರಿದ ಮಹಾನುಭಾವ ನಹುಷಚಕ್ರವರ್ತಿ ಋಷಿ ಶಾಪಕ್ಕೆ ಒಳಗಾಗಿ ಪರ್ವತಪ್ರದೇಶದಲ್ಲಿ ಅಜಗರವಾಗಿ ಬಿದ್ದಿದ್ದರು. ಯಾವ ಸಮಾನಯೋಗ್ಯತೆಯ ಮಹಾನುಭಾವನಲ್ಲಿ ಧರ್ಮಜಿಜ್ಞಾಸೆಯನ್ನು ನಡೆಸಿ ಪ್ರಶ್ನೋತ್ತರಗಳ ಸಂದರ್ಭದಲ್ಲಿ ಏಕಕಾಲದಲ್ಲಿ ನೀವಿಬ್ಬರೂ

ಸಂತೃಪ್ತರಾಗುತ್ತಾರೋ. ಆಗ ನಿನ್ನ ಶಾಪವಿಮೋಚನೆಯಾಗುತ್ತದೆಂಬ ಹುರಿಶಾಪವನ್ನೂ ಇತ್ತಿದ್ದರಂತೆ. ಅವರನ್ನು ಶಪಿಸಿದರು ಅಂತಹ ನಹುಷ ಚಕ್ರವರ್ತಿಗಳು ಮೊನ್ನೆ ಮೊನ್ನೆಯಷ್ಟೆ ನನ್ನ ಹಿರಿಯರಸ ಧರ್ಮರಾಜರಿಂದ ಶಾಪ ವಿಮುಕ್ತರಾದರು. ಹಾಗಾದರೆ ನಹುಷ ಚಕ್ರವರ್ತಿಯು ಸಮಾನ ಯೋಗ್ಯತೆಯ ಮಹಾನುಭಾವ ಧರ್ಮಜರೆಂದಾಯಿತು. ಅಂತವರು ವಿರಾಟನಗರಿಯಲ್ಲಿ ಒಂದು ವರ್ಷದ ಮಟ್ಟಿಗೆ ದೇವರ ಪೂಜೆ ಮಾಡಿಕೊಂಡು "ಕಂಕ" ಎಂಬ ಹೆಸರಿನಿಂದರುತ್ತೇನೆಂದು ಹೇಳಿ ಹೊರಟು ಹೋಗುವಾಗ ನನ್ನ ಕರುಳನ್ನು ಕತ್ತರಿಸಿದ ನೋವಿನ ಅನುಭವವಾಯಿತ್ತು. ಘೋರಾರಣ್ಯ ಮಧ್ಯದಲ್ಲಿ ಹೆತ್ತ ತಾಯಿ ಎತ್ತಿ ಆಡಿಸುತ್ತಿದ್ದಾಗ ಬಾಯಿಬಿಟ್ಟು ಭಾಂಕರಿಸಿದ ಹುಲಿಯ ಘರ್ಜನೆಯನ್ನು ಕೇಳಿ ಹೆದರಿ ಕೂಗಿ ಭೀಮಸೇನ ದೇವರನ್ನು ಕೈ ಬಿಟ್ಟರಂತೆ. ಭೀಮಸೇನ ದೇವರು ಬಂಡೆಯ ಮೇಲೆ ಬಿದ್ದರಂತೆ. ಮಗುವೊಂದು ಬಂಡೆಯ ಮೇಲೆ ಬಿದ್ದಾಗ ಸಹಜವಾಗಿ ಮಗುವಿನ ತಲೆ ಒಡೆಯಲ್ಪಡುತ್ತದೆ. ಅಲ್ಲಿ ಮಾತ್ರ ಬಂಡೆಯೇ ಇಬ್ಭಾಗವಾಯಿತಂತೆ. ಅಂತಹ ಬಲಿಷ್ಠವಾದ ಕಾಯವನ್ನು ಹೊಂದಿದ್ದ ಶತಗಜತ್ರಾಣಿ ಭೀಮಸೇನ ದೇವರು ವಿರಾಟನಗರಿಯಲ್ಲಿ "ವಲಲ" ಎಂಬ ಹೆಸರಿನಿಂದ ಅಡುಗೆಭಟ್ಟನಾಗಿ ಒಂದು ವರ್ಷಕಳೆಯುತ್ತೇನೆ ಎಂದು ಹೇಳಿ ಹೊರಟು ಹೋಗುವಾಗ ನನ್ನ ಹೃದಯವನ್ನೇ ಹಿಂಡಿದ ನೋವಿನ ಅನುಭವಾಯ್ತು. ಕಿರಾತರೂಪಿಯಾದ ಶಿವನ ಕೂಡೆ ಸೆಣಸಾಡಿದವರು, ಪಾಶುಪತಾಸ್ತ್ರವನ್ನು ಪಡೆದವರು, ಇಂದ್ರಾಸನವನ್ನು ಏರಿದವರು ನಿವಾತಕವಚರನ್ನು ಸೀಳಿದವರು. ಕಿರೀಟಿಯೆಂದೇ ಈ ಲೋಕದಲ್ಲಿ ಖ್ಯಾತರಾದ ಅರ್ಜುನದೇವರು ವಿರಾಟನಗರಿಯಲ್ಲಿ ಗಂಡು ಅಲ್ಲದ ಹೆಣ್ಣು ಅಲ್ಲದ 'ಬ್ರಹನ್ನಳೆ' ಎಂಬ ಹೆಸರಿನಿಂದ ಅಲ್ಲಿರುವ ಮಕ್ಕಳಿಗೆ ನಾಟ್ಯ ಕಲಿಸುತ್ತೇನೆಂದು ಹೇಳಿ ಹೊರಟು ಹೋಗುವಾಗ ನನ್ನ ಕೊರಳನ್ನೇ ಅವುಕಿ ಹಿಡಿದ ನೋವಿನ ಅನುಭವವಾಯ್ತು. ಭವಿಷತ್‌ಜ್ಞಾನಿಗಳೂ ಬ್ರಹ್ಮವಿದ್ಯಾ ಪ್ರವೀಣರೂ ಆದ ನಕುಲ ಸಹದೇವರು ಒಬ್ಬರಿಗೆ ದನ ಕಾಯುವ ಕೆಲಸ, ಒಬ್ಬರಿಗೆ ಕುದುರೆ ಮೈ ತೊಳೆಸುವ ಹೀನ ವೃತ್ತಿ. ಯಾವ ಪವಿತ್ರಾತ್ಮಳಾದ ಕುಂತೀದೇವಿಯ ಸೇವೆಯನ್ನು ಮಾಡಿ ಸಂತುಷ್ಠಳಾಗುತ್ತಿದ್ದನೋ, ಅಂತಹ ನನಗೆ ನನಗಿಂತ ನಿಕೃಷ್ಟಳಾದ ಸುದೇಷ್ಣೆಯ ಸೇವೆ ಮಾಡುವ ದುರ್ಗತಿ ಬಂತು. ಆದ್ದರಿಂದಲೇ ಧರ್ಮರಾಜರಲ್ಲಿ ನಾನೊಂದು ಪ್ರಶ್ನೆ ಮಾಡಿದೆ. ಭಾರ್ಯಾಸಂರಕ್ಷಣೆ ಪುರುಷನಿಗೆ ಧರ್ಮ. ಸಹಧರ್ಮಚರ್ಯೆ ಸ್ತ್ರೀ ವಿಹಿತಕರ್ಮ. ಪತಿಯ ಪಾದ ಸೇವೆ ಮಾಡಿ ಹೆಣ್ಣು ಬದುಕಬೇಕು. ಹೆಣ್ಣನ್ನು ಗಂಡು ಸಂರಕ್ಷಿಸಬೇಕು. ಒಂದು ವರ್ಷದ ಮಟ್ಟಿಗಾದರೂ ನಿಮ್ಮನ್ನು ಬಿಟ್ಟಿರುವುದು ಸರಿಯೇ? ಧರ್ಮವೇ? ಎಂದು ಕೇಳಿದೆ. ಸಮರ್ಪಕವಾದ ಮಾತೊಂದುನ್ನು ಆಡಿದರು. "ಎಲ್ಲಾ ಕಾಲಕ್ಕೆ, ಎಲ್ಲಾ ಜನಕ್ಕೆ, ಎಲ್ಲಾ ದೇಶಕ್ಕೆ ಸಂಬಂಧಪಟ್ಟಿದ್ದು ಸಾಮಾನ್ಯವಾದ ಧರ್ಮ. ಕೆಲವು ಕಾಲಕ್ಕೆ, ಕೆಲವು ಜನಕ್ಕೆ, ಕೆಲವು ದೇಶಕ್ಕೆ ಸಂಬಂಧಪಟ್ಟಿದ್ದು ವಿಶೇಷವಾದ ಧರ್ಮ. ಇಲ್ಲಿ ನಾವು ವಿಶೇಷ ಧರ್ಮಾವಲಂಬಿಗಳಾಗಿ ಒಂದು ವರ್ಷವನ್ನು

ಕಳೆಯಲೇಬೇಕು. ಆದ್ದರಿಂದ ಮಾನ ಮರ್ಯಾದೆಗೆ ಧಕ್ಕೆ ಬರದಂತೆ ಜಾಗ್ರತೆಯಿಂದ ಒಂದು ವರ್ಷ ಕಳೆದು ಬಾ ಎಂದು ಹೇಳಿದರು. ಹೊರಟು ಬರುತ್ತಿದ್ದೇನೆ. ಇಕ್ಕೆಲದಲ್ಲಿ ಸೇರಿದ ಜನಸಂದಣಿ ನನ್ನನ್ನೇ ನೋಡುತ್ತಿದ್ದಾರೆ. ಸಾಲದೆಂಬಂತೆ ಅವರವರೊಳಗೆ ಏನೋ ಮಾತನಾಡಿಕೊಳ್ಳುತ್ತಿದ್ದಾರೆ. ಯಾರು ಏನನ್ನು ಆಡಿಕೊಂಡರೇನಂತೆ. ನನಗೆ ಬೇಕಾಗಿರುವುದು ಸುದೇಷ್ಣೆ ಸೈರಂಧ್ರಿಯೆನ್ನುವ ಹೆಸರನ್ನು ನಾನಿರಿಸಿಕೊಂಡಿದ್ದೇನೆ. ಸುದೇಷ್ಣೆ ಯಾವ ಉದ್ಯೋಗ ಮಾಡುತ್ತೀ ಎಂದು ಕೇಳಬಾರದು. ಸೈರೆಂಧ್ರಿ ಎಂದರೆ ಪರರ ದಾಸಿ ವೃತ್ತಿಯಲ್ಲಿರುವವಳು ಅಂತ ಅರ್ಥ.

(ಜಯ, ವಿಜಯ, ಜಯೇಶ, ಜಯಸೇನ ಜಯದ್ಬಲ+ಮಾಲಿನಿ)ಐವರು ಗಂಧರ್ವ ಪತಿಗಳು ಅವರ ಮಾನಿನಿ ಮಾಲಿನಿ ಎಂಬ ಹೆಸರೆನಗೆ.

ದುರಳ ಕೀಚಕ ನನ್ನನು ಅಟ್ಟಿಕೊಂಡು ಬಂದ. ಜನವರ್ಜಿತವಾದ ಪ್ರದೇಶಕ್ಕೆ ಹೋದರೆ ದುರುಳ ಬಿಡಲಾರ ಎಂದು ಭಾವಿಸಿ ತುಂಬಿದ ಸಭೆಯನ್ನು ಪ್ರವೇಶಿಸಿದೆ. ಯಾರಾದರೂ ಖಳನಿಗೆ ಬುದ್ಧಿ ಹೇಳುತ್ತಾರೆಂದು ನಾನು ಭಾವಿಸಿದ್ದೆ. ಎಲ್ಲವರು ಬಾಯಿಬಿಟ್ಟು ಕುಳಿತಿದ್ದಾರೆ. ತುಂಬಿದ ಸಭೆ ಕಾರಡವಿಗೆ ಸಮಾನವಾಯ್ತು. ಇಲ್ಲಿ ಸೇರಿದವರೆಲ್ಲ ಮೃಗಪಕ್ಷಿಗಳಂತೆ ವ್ಯವಹರಿಸಿದರು. ನಿಮ್ಮಕ್ಕನೋ ತಂಗಿಯೋ ತಾಯಿಯೋ ಆಗಿದ್ದರೆ ಈ ಪರಿಸ್ಥಿತಿಯಲ್ಲಿ ಸುಮ್ಮನಿರುತ್ತಿದ್ದರೋ? ದುರಾತ್ಮನಾದ ಕೀಚಕ ಅಟ್ಟಿಕೊಂಡು ಬಂದು, ಎಳೆದು, ತುಳಿದು, ಬಾಯಿಗೆ ಬಂದಂತೆ ಬೈದು ಹೋದ ದೃಶ್ಯವನ್ನು ನೀವು ಮೂಕ ಪ್ರೇಕ್ಷಕರಾಗಿ ನೋಡಿದಿರಲ್ಲ. ನಿಮ್ಮ ಮನಸ್ಸಿಗೆ ಸರಿ ಕಂಡಿತೇ? ನಿಮ್ಮ ಅಕ್ಕನೋ ತಂಗಿಯೋ ಎಂದು ಯಾಕೆ ಭಾವಿಸಬಾರದಿತ್ತು. ಏಕೆ ನೀವು ಸುಮ್ಮನೆ ಕುಳಿತಿದ್ದೀರಿ ಎಂತಲೂ ನನಗೆ ತಿಳಿಯಿತು. ದುಷ್ಟಂ ದೂರಂವರ್ಜಯೇತ್ . ದುಷ್ಟನನ್ನು ದೂರದಲ್ಲೇ ಇಡಬೇಕು. ಸರಿ ಎಂದು ಅನ್ನಿಸದಿದ್ದರೂ, ಖಳನನ್ನು ಎದುರಿಸುವ ಧೈರ್ಯ ನಿಮಗಿಲ್ಲ. ಆದ್ದರಿಂದ ನೀವಲ್ಲಿ ಸುಮ್ಮನೆ ಕುಳಿತಿದ್ದೀರಿ. ಅಂತ ಹಳಿದು ಇತ್ತ ಬಂದೆ. ನಾನಂತು ಸುಮ್ಮನುಳಿಯಲು ಸಾಧ್ಯವಿಲ್ಲ. ಸುಮ್ಮನೆ ಕುಳಿತರೆ ಇವತ್ತಲ್ಲ ನಾಳೆಯಾದರೂ ಈತ ನನ್ನ ಶೀಲ ಕೆಡಿಸುವುದು ಖಂಡಿತ. ಆದ್ದರಿಂದ ನಾನು ಜಾಗೃತಳಾಗಲೇಬೇಕು. ಯಾರಲ್ಲಿ ಹೇಳಿಕೊಳ್ಳಲಿ. ಧರ್ಮರಾಜರಲ್ಲಿ ಹೇಳಿಕೊಳ್ಳೋಣವೇ? ಹೇಳೋಣ ಅಂತ ಹೋದರೆ ಮಂತ್ರದೊಳಗೇ ಸೇರಿಸಿ ಇಲ್ಲಿ ಬರಬೇಡ ಅಂತ ಹೇಳಿದಿದ್ದರೆ ಧರ್ಮರಾಜರೇ ಅಲ್ಲ ಅವರು. ಅರ್ಜುನ ದೇವರು ಗಂಡೂ ಅಲ್ಲ ಹೆಣ್ಣು ಅಲ್ಲ .ನಕುಲ ಸಹದೇವರು ಅಸಮರ್ಥರು. ಹಾಗಾದರೆ ಎಲ್ಲರೊಳು ಕಲಿ ಭೀಮನು. ಮಿಡುಕುಳ್ಳ ಗಂಡನು. ನಿಲ್ಲದಂಗೈಸುವನು, ಕಡು ಹೀಯಾಳಿಯುಳ್ಳವನು (= ಅತಿ ಪ್ರೀತಿಸುವನು) ಅತಿ ಪ್ರೀತಿಯುಳ್ಳವನು. ಆದ್ದರಿಂದ ಭೀಮಾಸೇನ ದೇವರಲ್ಲೇ ವಿಷಯ ಹೇಳುತ್ತೇನೆ. ಯಾರಿಗೂ ತಿಳಿಯದಂತೆ ಬಾಣಸಿನ ಭವನವನ್ನು ಪ್ರವೇಶಿಸಿದೆ. ನನ್ನರಸ ಎಲ್ಲಿದ್ದಾರೆಂದು ಆ ಕಡೆ ಈ ಕಡೆ ನೋಡುತ್ತಿದ್ದೇನೆ.

ನೋಡುವುದೇನನ್ನು ಶಿವನೇ, ಒಂದೆಡೆಯಲ್ಲಿ ಬೂದಿಯರಾಶಿ, ಮತ್ತೊಂದೆಡೆಯಲ್ಲಿ ಕೆಂಡದರಾಶಿ, ಮತ್ತೊಂದೆಡೆಯಲ್ಲಿ ಕಟ್ಟಿಗೆ ರಾಶಿ. ಮಧ್ಯದಲ್ಲಿ ಸಿಕ್ಕಿದ ಸ್ಥಳದಲ್ಲಿ ಮಲಗಿ ನಿದ್ರಿಸುತ್ತಿದ್ದಾರೆ. ಅವರ ಈ ದುಸ್ಥಿತಿಯನ್ನು ಕಂಡ ನನ್ನ ಕಣ್ಣುಗಳೇಕೆ ಕುರುಡಾಗಿ ಹೋಗಲಾರವು, ಪವಿತ್ರವಾದ ಚಂದ್ರವಂಶದಲ್ಲಿ ಹುಟ್ಟಿದವರು, ಹಂಸತೂಲಿಕಾತಲ್ಪದಲ್ಲಿ ಪವಡಿಸಬೇಕಾದವರು. ಮೃಷ್ಟಾನ್ನ ಭೋಜನ ಭುಂಜಿಸಬೇಕಾದವರು. ಬಂದವರಿಗೆಲ್ಲ ಅಡುಗೆಮಾಡಿ ಹಾಕಿ ಆಯಾಸಗೊಂಡು ಮಲಗಿದ ಇವರನ್ನು ನಾನು ಎಬ್ಬಿಸುವುದಾದರೂ ಹೇಗೆ? ಮಲಗಿದವರನ್ನು ಎಬ್ಬಿಸಿದರೆ ಸುಮ್ಮನಿರುತ್ತಾರೆಯೇ? ಬಾಯಿಗೆ ಬಂದಂತೆ ಬೈಯಬಹುದು ಅಲ್ಲ ಹೊಡೆಯಲೂಬಹುದು. ಹಾಗೆಂದು ಹಿಂದಕ್ಕೆ ಹೋಗುವುದಕ್ಕಿದೆಯೇ.? ಹೊಡೆದರೆ ಹೊಡೆಯಲಿ ಬೈದರೆ ಬೈಯಲಿ. ಎಷ್ಟೆಂದರೂ ಗಂಡ. ಆದ್ದರಿಂದ ಎಬ್ಬಿಸುವುದು ಎಬ್ಬಿಸುವುದೆ.

ಎರೆಯಕೇಳ್– ಶಿವಶಿವಾ ಇದೆಂತಹ ಮಾತು ಇವತ್ತಿನಿಂದ ನೀವು ನನ್ನ ಗಂಡನೂ ಅಲ್ಲ ನಾನು ನಿಮ್ಮ ಹೆಂಡತಿಯೂ ಅಲ್ಲ. ಇಂತಹ ನಿಮ್ಮ ವಾಗ್ಬಾಣಗಳು ನನ್ನ ಹೃದಯವನ್ನೇ ಬೇಧಿಸುತ್ತವೆ. ಇನ್ನೊಮ್ಮೆ ಅಂತಹ ಮಾತುಗಳನ್ನುಡಬೇಡಿ. ಕೇಳಿ ಸಹಿಸುವ ಶಕ್ತಿ ಎನ್ನೊಳಿಲ್ಲ. ನಿಮ್ಮನ್ನು ಗಂಡ ಅಲ್ಲ ಎಂದು ಭಾವಿಸಿ ಬದುಕುವುದಕ್ಕೆ ಸಾಧ್ಯವಿದೆಯೇ? ನನ್ನ ತಂದೆ ಮತ್ಸ್ಯ ಯಂತ್ರ ಬೇಧಿಸಿದ ಅರ್ಜುನ ದೇವರಿಗೆ ನನ್ನ ಕೊಡಬೇಕೆಂದು ಕೈಹಿಡಿದು ನಿಂತಿದ್ದಾಗ ನೀವೈದು ಜನ ಕೈ ನೀಡಿದಿರಿ. ಆಗ ನನ್ನ ತಂದೆ ಐವರಿಗೆ ಮದುವೆ ಮಾಡಿ ಕೊಡಲು ಸಮ್ಮತಿಸಲಿಲ್ಲ. ಆಗ ನಿಮ್ಮ ಗುರುಗಳು ವೇದವ್ಯಾಸರು ಅಲ್ಲಿಯವರಗಾಗಿ ಬಂದು ನನ್ನ ತಂದೆಗೆ ಸಮಾಧಾನ ಹೇಳಿ ಪಾಂಡವರು ದೈವಾಂಶ ಸಂಭೂತರು ದ್ರೌಪದಿ ಅಗ್ನಿ ಸಂಭವೇ. ಈ ಮಿಲನಕ್ಕೆ ವಿಶೇಷವಾದ ವಿಶಿಷ್ಠವಾದ ಅರ್ಥವಿದೆ. ಇದು ಅನ್ಯರಿಗೆ ಅನುಕರಣೀಯವಲ್ಲ, ಅನುಸರಣೀಯವಲ್ಲ. ದ್ರೌಪದಿಯ ಮಟ್ಟಿಗೆ ಮಾತ್ರ ಇವತ್ತಿನಿಂದ ದ್ರೌಪದಿ ಪಂಚವಲ್ಲಭೆ ಎಂದು ಘೋಷಿಸಿದರು.

ಅಂದು ಪಂಚವಲ್ಲಭೆ ಎಂದು ಘೋಷಿಸಲ್ಪಟ್ಟ ದ್ರೌಪದಿ ಚತುರ್ವಲ್ಲಭೆಯಾಗಿ ಬದುಕಲು ಸಾಧ್ಯವಿದೆಯೇ? ಅದರಲ್ಲಿ ಅಷ್ಟು ನೊಂದುಕೊಳ್ಳುವುದಕ್ಕೇನಿದೆ ಹೇಳಿ. ನಿಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಪಟ್ಟೆಸೀರೆ ಬೇಕು ಅಂತ ಕೇಳಿದೆನೋ, ಬಂಗಾರ ಬೇಕು ಅಂತ ಬೇಡಿದೆನೋ. ನಾನು ಮಾನವನ್ನು ಉಳಿಸಿಕೊಡಿ ಎಂದು ಬೇಡಿದೆ. ಸಂಪತ್ತನ್ನು ಕಳೆದುಕೊಂಡರೆ ಮರಳಿ ಗಳಿಸಿಕೊಳ್ಳಬಹುದು. ಮಾನವನ್ನು ಕಳೆದುಕೊಂಡರೆ ಮತ್ತೆ ಪಡೆಯಲು ಸಾಧ್ಯವಿಲ್ಲ. ಪ್ರಾಣಾಧಿಕವಾದದ್ದು ಮಾನ, ಯಾವುದನ್ನು ಕಳೆದುಕೊಂಡರೆ ಮರಳಿ ಪಡೆಯಲು ಸಾಧ್ಯವಿಲ್ಲವೋ ಅಂತಹ ಮಾನವನ್ನು ಉಳಿಸಿಕೊಡಿ ಎಂದು ಬೇಡಿರುವುದು ನನ್ನ ಅಪರಾಧವೇ ಹೇಳಿ. ಸಾಕು ನಿಮ್ಮೆಲ್ಲರ ಸತಿಯಾಗಿ ನಾನು ಅನುಭವಿಸಿರುವುದೇ ಸಾಕು. ನೀವೈವರೂ ಒಟ್ಟಾಗಿ ಬದುಕಿ, ಒಂದು ಕೆಲಸ ಮಾಡಿ. ಯಾವ ಕೈಯಿಂದ ಮಾಂಗಲ್ಯ ಕಟ್ಟಿದಿರೋ ಅದೇ ಕೈಯಿಂದ ನನಗಷ್ಟು ವಿಷ ಕೊಟ್ಟು ಬಿಡಿ.

## ರತಿ ಕಲ್ಯಾಣ – ದ್ರೌಪದಿ

ಏನಿದು ವಿಚಿತ್ರ? ಮಧ್ಯರಾತ್ರಿ ಕಾಲ. ಎಲ್ಲವರೂ ನಿದ್ರಾ ದೇವಿಯ ತೋಳ ತೆಕ್ಕೆಯಲ್ಲಿ ಒರಗಿದ್ದು ನಗರವೇ ನಿಶ್ಯಬ್ದ ವಾತಾವರಣದಿಂದ ಕೂಡಿದೆ. ಸುತ್ತಲೂ ಕತ್ತಲೂ ಆವರಿಸಿದ ಆ ಮಧ್ಯರಾತ್ರಿ ಕಾಲದಲ್ಲಿ ಯಾರೋ ನನ್ನನ್ನು ಕೂಗಿ ಕರೆದ ಹಾಗೆ. ಯಾರೋ ನನ್ನನ್ನು ಬಡಿದು ಎಬ್ಬಿಸಿದ ಹಾಗೆ, ಎಚ್ಚರಗೊಂಡೆ. ಕಣ್ಣರಳಿಸಿ ಕಂಡೆ. ಯಾರೂ ಕಾಣಿಸುತ್ತಿಲ್ಲ, ಹಾಕಿದ ಬಾಗಿಲು ಹಾಕಿದ ಹಾಗೆ ಇದೆ. ಗಾಳಿ ಒಂದನ್ನು ಬಿಟ್ಟರೆ ನೊಣವೂ ಪ್ರವೇಶಿಸದ ಭದ್ರವಾದ ನನ್ನ ಅಂತ:ಪುರಕ್ಕೆ ಅನ್ಯರು ಪ್ರವೇಶಿಸಲು ಸಾಧ್ಯವೇ ಇಲ್ಲ. ಜೊತೆಯಲ್ಲಿ ಮಲಗಿದ್ದ ಅರ್ಜುನ ದೇವರು ನಿದ್ದೆಯಲ್ಲಿದ್ದಾರೆ. ಇದು ಕೇವಲ ನನ್ನ ಭ್ರಮೆ. ಭ್ರಮೆ ಎಂದು ಭಾವಿಸಿ ಮಲಗಿ ನಿದ್ರಿಸುವುದಕ್ಕೆ ಹೊರಟರೆ ಮತ್ತೆ ಮತ್ತೆ ಕರೆಯುವುದು ಕೇಳಿಸುತ್ತಿದೆಯಲ್ಲ. ಆಸಕ್ತಿಯಿಂದ ಆಲಿಸಿದಾಗ ಆಕಾರ ಕಣ್ಣಿಗೆ ಕಾಣದಿದ್ದರೇನಂತೆ, ಸ್ವರದಿಂದ ಪರಿಚಯವಾಯ್ತು. ಅಣ್ಣನಾದ ಶ್ರೀ ಕೃಷ್ಣ ಕೂಗಿ ಕರೆಯುತ್ತಿದ್ದಾನೆ. ತಂಗಿ ದ್ರೌಪದಿ, ಕೋಮಲಾಂಗಿ, ಮಂಗಲಾತ್ಮಕೆ, ಮಧುರ ಭಾಷಿಣಿ, ಹಿಂಗದೆನ್ನಯ ಮಾನವನು ನೀ ಕಾಯಬೇಕೆಂದು ಅಂಗಜನ ಪಿತನಾದ ಶ್ರೀಕೃಷ್ಣ ನನ್ನನ್ನು ಒಂದೇ ಸವನೆ ಕರೆಯುತ್ತಿದ್ದಾನೆ. ವಿಚಿತ್ರ! ಲೋಕದ ಸಕಲರ ಮಾನವನ್ನುಳಿಸಬಲ್ಲ ಮಹಾನುಭಾವನಾದ ಕೃಷ್ಣನಿಗೆ ಮಾನ ಹೋಗುವ ಪರಿಸ್ಥಿತಿ ಬಂದಿದೆ ಎಂದರೆ ಆಶ್ಚರ್ಯದ ಸಂಗತಿ. ಹೋಗಬೇಕೋ? ಬಿಡಬೇಕೋ? ಹೋಗದೆ ಇದ್ದರೆ ಮುಕ್ಕಣ್ಣಸಖ ಖತಿಗೊಳ್ಳುತ್ತಾನೆ. ಹೋದರೆ ಮಲಗಿದ್ದ ಅರ್ಜುನ ದೇವರೆದ್ದು ಇನ್ನಾವ ಶಿಕ್ಷೆ ಕೊಡುತ್ತಾರೋ? ನಿದ್ದೆಯಲ್ಲಿದ್ದ ಅವರನ್ನು ಎಬ್ಬಿಸೋಣವೆಂದರೆ ನಿದ್ರಾಭಂಗದಂತಹ ದೋಷ ಪ್ರಾಪ್ತಿಸುತ್ತದೆ. ಆದ್ದರಿಂದ ಅವರಿಗೆ ವಿಷಯವನ್ನು ಹೇಳುವುದಿಲ್ಲ. ಈಗಲೇ ತೆರಳಿ ಕೃಷ್ಣನನ್ನು ಕಂಡು ಏನಾಗಿದೆ ಎಂದು ಕೇಳುತ್ತೇನೆ.(ನಿರ್ಗಮನ)

ಅಣ್ಣ ಕೃಷ್ಣನನ್ನು ಕಂಡೆ, ಕಾಲಿಗೆರಗಿದೆ. ದಯಾಮಯನಾದ ಶ್ರೀಕೃಷ್ಣ ತನ್ನೆಲ್ಲಾ ನೋವನ್ನು ನುಂಗಿಕೊಂಡು ನನ್ನನ್ನು ಮೈದಡವಿ ಮುಂಗುರುಳನ್ನು ನೇವರಿಸುತ್ತ "ತಂಗಿ ಪಾಂಡವರು ಕ್ಷೇಮವಾಗಿದ್ದಾರೆಯೇ" ಎಂದು ಕೇಳಿದ. ಪಾಡವರ ಬಗ್ಗೆ ಅದೆಂತಹ ವಾತ್ಸಲ್ಯ ಕೃಷ್ಣನಿಗೆ? "ಪಾಂಡವರು ಕ್ಷೇಮವಾಗಿದ್ದಾರೆ ನನ್ನನ್ನು ಕರೆಯುವುದಕ್ಕೆ ಕಾರಣವೇನೆಂದು "ಕೇಳಿದೆ. ಆಗ ಇಲ್ಲಿ ನಡೆದ ಘಟನೆಯನ್ನೆಲ್ಲ ವಿವರಿಸಿದ. ಸಭೆಯಲ್ಲಿ ನಾರಿಯರೊಂದಿಗೆ ಶ್ರೀಕೃಷ್ಣನಿದ್ದ ಹೊತ್ತು, ಮಡದಿಯಾದ ರುಕ್ಮಿಣಿ ಮ್ಲಾನವದನೆಯಾಗಿ ಬಂದು ಕೃಷ್ಣನ ಕಾಲಗೆರಗಿದಳಂತೆ. ಮೇಲೆತ್ತಿದ ಕೃಷ್ಣ ಮುಖ ಬಾಡಲು ಕಾರಣವೇನೆಂದು ಕೇಳಿದನಂತೆ. ಆಗ ರುಕ್ಮಿಣಿ ಹೇಳಿದಳಂತೆ. "ಮಗ ಮನ್ಮಥ ಪ್ರಾಯಪ್ರಬುದ್ಧನಾಗಿದ್ದಾನೆ.

ಅವನಿಗಿನ್ನು ನೀವು ಮದುವೆ ಮಾಡಲಿಲ್ಲ ಅಂತ ಹೇಳಿದಳಂತೆ. ಕೇಳಿದ ಕೃಷ್ಣ ಎಂಟು ದಿನದೊಳಗೆ ಮಗ ಮನ್ಮಥನಿಗೆ ಮದುವೆ ಮಾಡಿಸುತ್ತೇನೆ ಅಂತ ಹೇಳಿದನಂತೆ. ಪರಿಸ್ಥಿತಿ ಎಲ್ಲಿಗೆ ಬಂತು ನೋಡಿ. ಏನು ರುಕ್ಕ್ಮಿಣಿ ಏಕಾಂತಕ್ಕೆ ಕೃಷ್ಣ ಬರುವುದಿಲ್ಲವೋ? ಅಲ್ಲಿ ಹೇಳಬಹುದಾಗಿತ್ತು. ಸಭೆ ಮಧ್ಯದಲ್ಲಿ ಹೇಳಬೇಕಿತ್ತಾ? ಆಯ್ತು, ಎಂಟು ದಿನದಲ್ಲಿ ಮದುವೆ ಮಾಡಿಸುತ್ತೇನೆ ಎಂದು ಹೇಳಿದಾಗಲಾದರೂ ಬಾಯಿ ಮುಚ್ಚಿಕೊಂಡು ಹೋಗಬಹುದಿತ್ತು. ಇಲ್ಲ, ಹೋಗಲಿಲ್ಲ. ಎಂಟು ದಿನದೊಳಗೆ ಮದುವೆ ಮಾಡಿಸದೇ ಇದ್ದರೆ? "ಇಲ್ಲ ಖಂಡಿತಾ ಮಾಡಿಸುತ್ತೇನೆ ಅಂತ ಹೇಳಿದನಂತೆ. ಅಲ್ಲಿಗೂ ರುಕ್ಕ್ಮಿಣಿ ಸುಮ್ಮನಾಗಲಿಲ್ಲ. ನೀವು ಹೇಳಿದ ಅವಧಿಯೊಳಗೆ ಮದುವೆ ಮಾಡಿಸದೇ ಇದ್ದರೆ ಹದಿನಾರು ಸಾವಿರ ಸ್ತ್ರೀಯರೊಂದಿಗೆ ನಿಮ್ಮನ್ನು ಬಿಟ್ಟು ದೂರ ಉಳಿಯುತ್ತೇನೆ ಅಂತ ಹೇಳಿದಳಂತೆ. ಏನು ಸೊಕ್ಕು ರುಕ್ಕ್ಮಿಣಿಗೆ. ತಾನು ಹೋಗುತ್ತೇನೆ ಅಂತ ಹೇಳಲಿ. ಹದಿನಾರು ಸಾವಿರ ಸ್ತ್ರೀಯರ ಮೇಲೆ ಏನು ಪ್ರಭುತ್ವ? ಪಟ್ಟದರಸಿಯಾದ್ದರಿಂದ ಹಕ್ಕಿದೆ ಅವಳಿಗೆ. ಆಗ ಕೃಷ್ಣ ಆಲೋಚನೆ ಮಾಡಿದ. ಒಂದು ವೇಳೆ ಹದಿನಾರು ಸಾವಿರ ಸ್ತ್ರೀಯರೊಡನೆ ದ್ವಾರಕೆಯನ್ನು ಬಿಟ್ಟು ಹೊರಟರೆ ಇರುವುದೆಲ್ಲಿ? ಇವರಿಗೆಲ್ಲ ಪ್ರತ್ಯೇಕ ಮನೆಯಾಗಬೇಕು. ಗುಡ್ಡ ಬೆಟ್ಟದಲ್ಲಿ ಬದುಕುವ ಸ್ಥಿತಿ ಬಂದರೆ ನೋಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆಲೋಚನೆ ಮಾಡಿದ ಕೃಷ್ಣ, ಹೇಳಿದ ಅವಧಿಯಲ್ಲಿ ಮದುವೆ ಆಗದಿದ್ದರೆ, ನೀವು ನನ್ನನ್ನು ಬಿಟ್ಟು ಹೋಗುವುದು ಬೇಡ ನಾನೇ ನಿಮ್ಮನ್ನು ಬಿಟ್ಟು ದೂರ ಹೋಗುತ್ತೇನೆ ಎಂದನಂತೆ. ಪಂಥ ಪೌರುಷಗಳು ನಡೆದು ಹೋದವು. ಜಾಗೃತನಾದ ಅಣ್ಣ ಗರುಡನನ್ನು ಏರಿ ಬಿಡದೇಳು ದಿನಗಳ ಕಾಲ ಹುಡುಕಿದ. ಎಲ್ಲಿ ಹುಡುಕಿದರೂ ಮನ್ಮಥನಿಗೆ ತಕ್ಕ ಹುಡುಗಿ ಹುಡುಕಲು ಸಾಧ್ಯವಾಗಲಿಲ್ಲ. ಅದಕ್ಕೆ ನಿನ್ನನ್ನು ಕರೆದಿರುವುದು ಎಂದ.

ಹೊಟ್ಟೆಯೊಳಗೆ ಹದಿನಾಲ್ಕು ಲೋಕವಿಟ್ಟುಕೊಂಡ ಮಹಾನುಭಾವನಾದ ಕೃಷ್ಣನಿಗೇ ಆಗಲಿಲ್ಲ. ಹೆಣ್ಣಾದ ನನ್ನಿಂದ ಸಾಧ್ಯವೇ ಅಂತ ಕೇಳಿದೆ. ಅದಕ್ಕೆ ತಂಗಿ ನನ್ನ ಕೊರಳ ಕೊಯ್ಯದಿರು. ನಿನ್ನಿಂದಾಗ್ತದೆ ಎನ್ನುವ ವಿಶ್ವಾಸ ನನಗಿದೆ. ಹೋಗು ಪ್ರಯತ್ನ ಮಾಡು ಎಂದ. ಆಯ್ತು ಎಂದು ಒಪ್ಪಿಕೊಂಡೆ. ಎಲ್ಲಿ ಹೋಗುವುದು? ಕೃಷ್ಣ ಹುಡುಕದಿರುವ ಸ್ಥಳವಿದೆಯೆ? ಇಲ್ಲ. ಆದ್ದರಿಂದ ದಿವ್ಯ ದೃಷ್ಟಿಯಿಂದ ಮನ್ಮಥನಿಗೆ ತಕ್ಕ ಹುಡುಗಿ ಎಲ್ಲಿದ್ದಾಳೆಂದು ತಿಳಿಯುತ್ತೇನೆ. ಹಾಹಾಃ ನನ್ನ ದಿವ್ಯ ದೃಷ್ಟಿಗೆ ಸುಂದರವಾದ ಪುರವೊಂದು ಗೋಚರಿಸಿತು. ಅದೇ ಪುರದ ಮಾರ್ಗ ಹಿಡಿದು ನಡೆಯುತ್ತೇನೆ ನೋಡೋಣ.

## ಸುಧನ್ವ. - ಪ್ರಭಾವತಿ

ಬಂಗಾರದ ತಟ್ಟೆಯಲ್ಲಿ ಸುಗಂಧ ಮಿಶ್ರಿತವಾದ ಸುಮಾದಿ ವಸ್ತುಗಳನ್ನು ಇರಿಸಿಕೊಂಡು ಬಾಗಿಲ ಬಳಿಯಲ್ಲಿ ನಾನು ನಿಂತಿದ್ದರೆ, "ಸತಿ ಶಿರೋಮಣಿ ಪ್ರಭಾವತಿ ಅತಿ ಹರುಷದಲಿ ಪತಿಗೆ ಎದುರಾಗುತ್ತ ಬಂದಳು" ಎಂದು ಹಾಡಿ ಹೊಗಳುತ್ತಲಿದ್ದಾರೆ. ಕೇಳಿದಾಗ ಅತ್ಯಂತ ಸಂತೋಷವಾಯಿತು. ಹಾಗೆಂದು ಕೇವಲ ನನ್ನ ಆಚಾರ-ವಿಚಾರ-ವ್ಯವಹಾರಗಳ ಪರಿಶುದ್ಧತೆಯಿಂದ ಈ ಕೀರ್ತಿಗೆ ಪಾತ್ರಳಾಗಿದ್ದೇನೆ ಎಂಬ ಅಹಂಕಾರ ನನಗಿಲ್ಲ. ಚಂಪಕಾವತಿಯ ರಾಜ ಮನೆತನವನ್ನು ಸೇರಿದ ನಾರಿಯರಿಗೆಲ್ಲ ಈ ಬಿರುದು ಬಾವಲಿಗಳು ಇದ್ದೇ ಇದೆ ಎನ್ನುವುದು ನನ್ನ ಅನಿಸಿಕೆ. ಕಾರಣ ನನ್ನ ಅತ್ತೆಯಾದ ಸುಗರ್ಭಾದೇವಿಯನ್ನು ಸಂಬೋಧಿಸುವಾಗ ಸತಿ ಸುಗರ್ಭೆ ಎಂದೇ ಕರೆಯುತ್ತಾರೆ. ನನ್ನನ್ನು ಕರೆಯುವಾಗ ಸತಿ ಶಿರೋಮಣಿ ಎಂದೇ ಕರೆಯುತ್ತಾರೆ. ಸತಿ ದೇವಿ ಎಂದು ಕರೆಯುವುದೇ ಹರನರಸಿಯನ್ನು ಮಾತ್ರ . ಬಿಟ್ಟರೆ ನನ್ನತ್ತೆಯನ್ನು ಸತಿ ಸುಗರ್ಭೆ ಎಂದೇ ಕರೆಯುತ್ತಾರೆ. ನನ್ನನ್ನು ಕರೆಯುವಾಗಲೂ ಸತಿ ಶಿರೋಮಣಿ. ಕನ್ಯೆಯರ ಕುಲಕ್ಕೆ ಪೂಮಾಲೆ, ಕಾಮನರಸಿ ಸಮರೂಪೆ ಹೀಗೆ ಕರೆಯುತ್ತಾರೆ. ಆದ್ದರಿಂದ ಈ ಮನೆತನ ಸೇರಿದ ನಾರಿಯರಿಗೆಲ್ಲ ಈ ಬಿರುದು ಬಾವಲಗಳಿದ್ದೇ ಇವೆ ಎಂಬುದು ನನ್ನನಿಸಿಕೆ. ರಾಜ್ಯ ಚಿಕ್ಕದಾಗಿದ್ದರೇನಂತೆ? ಸದ್ಧರ್ಮನಿರತರಾಗಿ ಸತ್ಯಾತ್ಮರಾಗಿ ನ್ಯಾಯಶೀಲರಾಗಿ ಕ್ಷಮಾಬುದ್ಧಿಸಂಪನ್ನರಾಗಿ ಈ ಪ್ರದೇಶವನ್ನು ಪಾಲಿಸುತ್ತಿರುವವರು ಹಂಸಧ್ವಜ ಭೂಪತಿಗಳು. ಇವರ ಸುತ ಸುಧನ್ವ ಎಂಬವರಿಗೆ ನಾನು ಪಟ್ಟದರಸಿ, ಅವರ ವಿದ್ಯಾ ಪ್ರೌಢಿಮೆ, ದೇಶ ಪ್ರೇಮ, ಜ್ಞಾನ ಸಂಪತ್ತು, ದೈವ ಭಕ್ತಿ ಇತ್ಯಾದಿಗಳು ನನ್ನ ಮನವನ್ನು ಮೆಚ್ಚಿಸಿವೆ. ಅವರ ಹೆಂಡತಿಯಾಗುವುದಕ್ಕೆ ಜನ್ಮ ಜನ್ಮಾಂತರೀಯವಾದ ಪುಣ್ಯದ ಫಲವೇ ಕಾರಣ. ಅತಿಯಾಗಿ ನನ್ನನ್ನು ಪ್ರೀತಿಸುವ ನನ್ನ ಗಂಡ, ತುಂಬಿದ ಸಂಸಾರದ ಮಧ್ಯದಲ್ಲಿ ಸುಖವಾಗಿ ಬದುಕುತ್ತಿದ್ದೇನೆ. ಆದರೆ ಒಂದು ಸಣ್ಣ ನೋವು ನನ್ನನ್ನು ಬಾಧಿಸುತ್ತಿದೆ. ಮದುವೆಯಾಗಿ ಕೆಲವೇ ವರ್ಷ ಕಳೆಯಿತು. ಸಂತಾನದ ಸೌಭಾಗ್ಯವನ್ನು ಪಡೆದಿಲ್ಲ ಹಾಗೆಂದು ನಿರಾಶರಾಗಿದ್ದೇವೆಂದು ಅರ್ಥವಲ್ಲ. ಇಂದಲ್ಲ ನಾಳೆ ನಾವು ನಂಬಿದ ನಮ್ಮ ದೇವರು ಅನುಗ್ರಹಿಸಿಯಾನೆಂಬ ವಿಶ್ವಾಸವಿದೆ. ಋತುಸ್ನಾತೆಯಾದ ನಾನು ಮಂಗಲ ಸ್ನಾನವನ್ನು ಮುಗಿಸಿದ್ದೇನೆ. ಸರ್ವಾಭರಣದಿಂದ ಸರ್ವಾಲಂಕೃತಳಾಗಿದ್ದೇನೆ. ನನ್ನರಸ ಬರುವ ಸಮಯವಾದುದರಿಂದ ಆಸಕ್ತಿಯಿಂದ ದಾರಿ ನೋಡುತ್ತಿದ್ದೇನೆ. ಓ ಬಂದೇ ಬಿಟ್ಟರು ಹೋಗಿ ಎದುರ್ಗೊಳ್ಳುತ್ತೇನೆ.

# ಭಸ್ಮಾಸುರ – ಮೋಹಿನಿ.

ಬಂದದ್ದು ಅಂದರೆ ಬಂದದ್ದೆ. ಬಲು ಚೆಂದದಿಂದ ಆನಂದದಿಂದ ಕಿರುನಗೆಯನ್ನು ಹೊರ ಸೂಸುತ್ತಾ ವೈಯಾರದಿಂದ ನಾನೀ ಕಡೆಗೆ ಬಂದೆ. ನನ್ನ ಗಮನವನ್ನು ಕಂಡ ಸುಮನಸರು, ಬಂದಳಾಗ ಮೋಹಿನಿ ಆನಂದದಿಂದ ಎಂದು ಹಾಡಿ ಹೊಗಳುತ್ತಿದ್ದಾರೆ. ಇಂತಹ ಸಂಧರ್ಭ ಬಂದಾಗ ಸಂದರ್ಭೋಚಿತವಾಗಿ ವ್ಯವಹರಿಸುವ ವಿವೇಕವುಳ್ಳ ನಾನು ಎಲ್ಲಿಗೆ ಎಷ್ಟು ಯಾಕೆ ಹೇಗೆ? ಎಂಬತ್ಯಾದಿಗಳನ್ನು ಮೊದಲೇ ತಿಳಿದು ತೀರ್ಮಾನಿಸಿಕೊಂಡು ಅಲ್ಲಿಗೆ ತಕ್ಕಂತೆಯೇ ವ್ಯಕ್ತಗೊಳ್ಳುತ್ತೇನೆ. ಕೊಡದ ಹಾಲನ್ನು ಕೆಡಿಸಲ್ಕೆ ಹುಳಿಯ ಹಿಂಡಿದರೆ ಒಂದು ಹನಿ ಹುಳಿ ಸಾಕು. ಒಂದು ಹನಿ ಹುಳಿ ಕೂಡ ಹಾಲನ್ನು ಕೆಡಿಸುವಂತೆ ದುರಾತ್ಮನಾದ ಭಸ್ಮಾಸುರನಂತಹ ಒಬ್ಬೊಬ್ಬರು ಹುಟ್ಟಿಕೊಂಡರೆ ಸಾಕು,. ಲೋಕದ ಸಾತ್ವಿಕ ಶಕ್ತಿಯಲ್ಲಾ ಕಂಗೆಟ್ಟು ಕಂಗಲಾಗಿ ಕಣ್ಣೀರು ಸುರಿಸಿ ಗೋಳೋ ಎಂದು ಅಳುವ ಕಾಲ ಸನ್ನಿಹಿತವಾದಾಗ ಲೋಕೋದ್ಧಾರದ ಕಲ್ಯಾಣ ಗುಣಗಳಿಂದ ಕೂಡಿದ ನಾನೇ ಧರೆಗಿಳಿದು ಬಂದು ಖಳರನ್ನು ಕೊಂದು ಲೋಕದಲ್ಲಿ ಧರ್ಮವನ್ನು ಶಾಂತಿಯನ್ನು ಸ್ಥಾಪಿಸಬೇಕಾಗುತ್ತದೆ. ತ್ರಿಮೂರ್ತಿಗಳಾದ ನಾವು ಕಾರ್ಯತ್ರಯದಿಂದ ಬಂಧಿತರು. ಒಬ್ಬನಿಗೆ ಸೃಷ್ಟಿಸುವ ಕೆಲಸ ಅವನೇ ರಜೋಗುಣಾಧಿಕ ಬ್ರಹ್ಮ. ಅವನಿರುವುದು ಸತ್ಯಲೋಕ, ರಜೋಗುಣ ರಹಿತನಾಗಿ, ತಮೋಗುಣ ವರ್ಜಿತನಾಗಿ, ಸಾತ್ವಿಕ ಗುಣದಿಂದ ಸಮೃದ್ಧನಾದ ನನ್ನನ್ನು ನಾರಾಯಣನೆಂದು ವಿಷ್ಣುವೆಂದು ಸಂಬೋಧಿಸುತ್ತಿದ್ದಾರೆ. ನಾನಿರುವುದು ಶ್ವೇತದ್ವೀಪದಲ್ಲಿ ಶೇಷಶಯನನಾಗಿ. ನನಗೆ ಸಂರಕ್ಷಣೆಯ ಕೆಲಸ. ಆ ಬಳಿಕ ಲಯಾಧಿಕಾರಿ ಈಶ. ಅವನಿರುವುದು ಕೈಲಾಸ ಅವನಿಂದಾಗಲಿಲ್ಲ, ಭಸ್ಮಾಸುರನ ನಾಶ. ಅದಕ್ಕಾಗಿಯೇ ಈ ರೀತಿಯ ವೇಷ ಈ ರೀತಿಯ ವೇಷ ಧರಿಸಿ, ಆಸೆ ತೋರಿಸಿ ಮೋಸ ಮಾಡಿದರೆ ಬರಲಿಕ್ಕಿಲ್ಲವಲ್ಲ ದೋಷ. ಮತ್ತೆ ಯಾರಿಗಾದರೂ ಮೋಸ ಮಾಡಬೇಕೋ ಸ್ತೀ ವೇಷ ಮಾಡುವುದಕ್ಕೆ ಅಭ್ಯಾಸ ಮಾಡಬೇಕು. ಸ್ತ್ರೀ ವೇಷದಲ್ಲಿ ಮೋಸ ಮಾಡಿದಷ್ಟು ಸುಲಭದಲ್ಲಿ ಬೇರೆ ವೇಷದಲ್ಲಿ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ಯಾರ್‍ಯಾರೋ ಹೇಳುವುದನ್ನು ಕೇಳಿ ಹೇಳುವುದಲ್ಲ . ನನ್ನ ಸ್ವಂತ ಅನುಭವ ಈ ಹಿಂದೆ ದೇವತೆಗಳು ದಾನವರು ಕೂಡಿ ಅಮೃತದಾಸೆಯಿಂದ ಕಡಲನ್ನು ಮಥಿಸಿದರು. ಆಗ ಅಮೃತ ಹುಟ್ಟಿಕೊಂಡಿತು. ದೇವತೆಗಳು ನಮಗೆ ಬೇಕೆಂದು,ದಾನವರು ತಮಗೆ ಬೇಕೆಂದು ಹೊಡೆದಾಡಿಕೊಳ್ಳಲಾರಂಬಿಸಿದರು ಆಗ ಹದಿನಾರು ವರ್ಷದ ಯುವತಿಯಾಗಿ ಮೋಹಿನಿ ಎಂಬ ಅಭಿಧಾನದಿಂದ ನಾನಲ್ಲಿ ಹೋದೆ. ದೇವತೆಗಳಿಗೆ ಅಮೃತವನ್ನು ಬಡಿಸಿ ರಾಕ್ಷಸರನ್ನು ವಂಚಿಸಿದೆ. ಆ ಹೊತ್ತಿನ ನನ್ನ ಅನುಭವದ ಮೇಲೆ ಈ ಹೊತ್ತಿನ ಭಸ್ಮಾಸುರನ ನಾಶಕ್ಕೆ ಸ್ತೀ ವೇಷವೇ ಅಗತ್ಯವೆಂದು ಭಾವಿಸಿ ಸ್ತೀ ವೇಷವನ್ನು ಧರಿಸಿ ಬಂದೆ. ಹೇಗೆ ನನ್ನ ಸ್ತೀ ವೇಷ? ನನ್ನ ಮುದ್ದಾದ ಮುಖ, ಬಾಚಿದ ತಲೆ, ತಿದ್ದಿದ ಮುಂಗುರುಳು, ಹೆಣೆದು ಬಿಟ್ಟ ಜಡೆ ನನ್ನ ಸೂಕ್ಷ್ಮವಾದ ಕಟಿ, ತುಂಬಿದ ನಿತಂಬ, ಮಲ್ಲಿಗೆಯ ಮೈಗಂಧ ಇದೆಲ್ಲಾ ಬೇಕಾ? ಖಳನಿಗೆ ನೋಡುವ ತಾಳ್ಮೆಯಾದರೂ ಇದೆಯಾ? ಅವ ಬರುವಾಗ ನಾನು ಹೀಗೆ ಮರಕ್ಕೆ ಒರಗಿದ್ದರೆ ಅವನ ಕಣ್ಣುಗಳು ನನ್ನ ತುಂಬಿದ ಎದೆಯ ಮೇಲೆ ಬಿತ್ತು ಎಂದಾದರೆ ನನ್ನ ಮೋಹದ ಬಲೆಯಲ್ಲಿ ಅವ ಬಿದ್ದ ಹಾಗೆ. ಆ ಮೇಲೆ ನಾನು ಹಾಕಿದ ತಾಳಕ್ಕೆ ಅವನು ಕುಣಿಯಲೇ ಬೇಕು. ಹಾಗೆಂದು ಅವನು ಇಲ್ಲಿಗೆ ಬರುವಾಗ ನಾನಲ್ಲಿ ಸುಮ್ಮನಿರುವುದಿಲ್ಲ. ಕುಣಿಯುತ್ತಾ ನಲಿಯುತ್ತಾ ಇರುತ್ತೇನೆ.

# ರಾಣಿ ಶಶಿಪ್ರಭೆ

ಲೋಕ ಮಾತೆ ಭಗವತಿ ಭಕ್ತಕೋಟಿಗಳುದ್ಧಾರಿಣಿ!. ತಾಯೇ ಸಂರಕ್ಷಿಸಮ್ಮ. ಮಂತ್ರಿಣಿ ಭ್ರಮರ ಕುಂತಳೆ, ಸೇನಾನಾಯಕಿ ಕಮಲಗಂಧಿ, ನೋಡಿದೆಯಾ ನಮ್ಮ ಸ್ತ್ರೀಯರ ವಿಶಾಲಸಭೆಯನ್ನು .ಒಬ್ಬರಲ್ಲ ಇಬ್ಬರಲ್ಲ, ಸಹಸ್ರಸಹಸ್ರ ಸಂಖ್ಯೆಯಲ್ಲಿ ಸೇರಿದ ಸ್ತ್ರೀಯರು ಹಸನ್ಮುಖಿಗಳಾಗಿ ಮಹಾರಾಣೀ ಶಶಿಪ್ರಭೆಗೆ ಜಯವಾಗಲಿ, ಮಹಾರಾಣಿ ಚಂದ್ರಪ್ರಭೆಗೆ ಶುಭವಾಗಲಿ ಎಂದೇ ಹಾರೈಸುತ್ತಿದ್ದಾರೆ. ಒಂದು ಕಾಲದಲ್ಲಿ ಸ್ತ್ರೀಯರಿಗೆ ಸ್ವಾತ್ರಂತ್ರ್ಯವೇ ಇಲ್ಲವೆಂದು ಪುರುಷರು ಕಡೆಗಣಿಸುತ್ತಿದ್ದ ಕಾಲವಿತ್ತು ಆದರೆ ಇಂದು ನಾವು ಸ್ತ್ರೀಯರಿಗೆ ಸ್ವಾತ್ರಂತ್ರ್ಯವಿದೆ ಎನ್ನುವುದನ್ನು ಒಗ್ಗಟ್ಟಿನ ಮೂಲಕ ತೋರಿಸಿಕೊಟ್ಟಿದ್ದೇವೆ. ಸಾಧನೆಯ ಮೂಲಕವಾಗಿ ಕಾಣಿಸಿಕೊಟ್ಟಿದ್ದೇವೆ. ನಾವೇ ಧನ್ಯೆಯರು, ಕನ್ಯೆಯರ ಕುಲಕ್ಕೆ ನಾವೇ ಮಾನ್ಯರು. ಸ್ತ್ರೀ ಸ್ವಾತಂತ್ರ್ಯಕ್ಕೆ ನಾವೇ ಮಾರ್ಗದರ್ಶಿನಿಯರು. ನಮ್ಮನ್ನು ಪ್ರಶ್ನಿಸುವ ಗಂಡೆದೆಯ ಗಂಡುಮಗ ಇದ್ದರೆ ಈಗ ಬರಬೇಕು. ಅವನ ಮೂಗು ಹಿಡಿದು ಮುಖಕ್ಕೆ ಬಡಿದು ಎದೆ ಮೆಟ್ಟಿ ವಿಚಾರಿಸುವಷ್ಟು ಯೋಗ್ಯತೆ ಈ ದೇಶದ ಮಹಾರಾಣಿಯಾದ ಶಶಿಪ್ರಭೆಗಿದೆ. ಆದರೆ ನಮ್ಮನ್ನು ಪ್ರಶ್ನಿಸುವ ಗಂಡು ಮಾತ್ರ ಈ ಪ್ರಪಂಚದಲ್ಲಿ ಹುಟ್ಟಿಲ್ಲ. ಭವಿಷ್ಯತ್ತಿನಲ್ಲಿ ಹುಟ್ಟಿ ಬರಲಾರ ಎಂಬುದು ನನ್ನ ಪರಮವಿಶ್ವಾಸ. ಒಂದು ರಾಜ್ಯವನ್ನು ಕಟ್ಟುವುದು ವಿಶೇಷವಲ್ಲ. ಸಂಪತ್ತನ್ನು ಗಳಿಸುವುದು ಮುಖ್ಯವಲ್ಲ. ಕಟ್ಟಿದ ರಾಜ್ಯವನ್ನು ಗಳಿಸಿದ ಸಂಪತ್ತನ್ನು ಉಳಿಸಿಕೊಳ್ಳವುದರಲ್ಲಿರುವುದು ಮಹತ್ವ. ಆದ್ದರಿಂದಲೇ ಪೂರ್ವಭಾವಿಯಾಗಿ ಯೋಚಿಸಿದ ನಾನು ಘೋರಕಾಂತಾರವನ್ನು ಸೇರಿದೆ. ಅನನ್ಯ ಭಕ್ತಿಯಿಂದ ಅಂಬಿಕೆಯನ್ನು ಆರಾಧಿಸಿದೆ. ನನ್ನ ಪರಿಶುದ್ಧಾಂತ:ಕರಣಕ್ಕೆ ಒಲಿದು ಬಂದ ಆಕೆ "ನಿನ್ನ ಕಾರ್ಯಕ್ಕೆ ನನ್ನ ಸಹಾಯವಿದೆ" ಎಂಬುದನ್ನು ಸೂಚಿಸುತ್ತಾ ಅಮೂಲ್ಯವಾದ ಹಾರವೊಂದನ್ನು ಅನುಗ್ರಹಿಸಿದ್ದಾಳೆ ಈ ಹಾರದ ಪ್ರಭಾವವೇನು? ನಾನು ಕುತ್ತಿಗೆಯಲ್ಲಿ ಧರಿಸಿ ಯುದ್ಧಕ್ಕೆ ನಿಂತರೆ, ಪ್ರತಿಸ್ಪರ್ಧಿಯ ಅರ್ಧ ಶಕ್ತಿಯನ್ನು ಸೆಳೆದುಕೊಡುತ್ತದೆ. ಕೈಯಲ್ಲಿ ಹಿಡಿದು ಕರೆದಾಗ ಗೋಂಡಾರಣ್ಯದಲ್ಲಿ ವಸತಿ ಮಾಡಿಕೊಂಡಿರುವ ಘೋರರೂಪಿ ಓಡಿಬರುತ್ತಾನೆ. ನನ್ನ ಎದುರುಗಡೆ ತಲೆತಗ್ಗಿಸಿ ಕೈಮುಗಿದು ನಾನು ಆಡಿದ್ದನ್ನು ಅತ್ಯಂತ ಶ್ರದ್ಧಾಪೂರ್ವಕವಾಗಿ ಮಾಡಿ ಮುಗಿಸುತ್ತಾನೆ. ಅಪಾಯದಿಂದ ಪಾರಾಗುವುದಕ್ಕೆ ಅದೃಶ್ಯಾಂಜನ. ಇಂತಹ ವಿಶಿಷ್ಟವಾದ, ವಿಶೇಷವಾದ ಶಕ್ತಿ ಸಾಮರ್ಥ್ಯವನ್ನು ಹೊಂದಿದ ಈ ಶಶಿಪ್ರಭೆಯನ್ನು ಕೆಣಕುವವರ್‍ಯಾರಿದ್ದಾರೆ? ಇಷ್ಟಕೆಲ್ಲಾ ಕಾರಣ ಈ ಲೋಕದಲ್ಲಿರುವ ಪುಂಡರು, ಭಂಡರು, ಅವಿವೇಕಿಗಳಾದ ಗಂಡಸರು. ಪುರುಷಪ್ರಧಾನ ಪ್ರಪಂಚವೆಂದು ವಾದಿಸುತಾರೆ. ನಾವದನ್ನು ಒಪ್ಪುವುದಿಲ್ಲ. ಹಾಗೆಂದು ಸ್ತ್ರಿ ಪ್ರಧಾನ ಪ್ರಪಂಚವೆಂದು ನಮ್ಮ ವಾದವಲ್ಲ. ಈ ಲೋಕದಲ್ಲಿ ಗಂಡು ಹೆಣ್ಣು ಸಮಾನ. ಒಂದು ರಥ ಸುಗಮವಾಗಿ ಸಾಗಬೇಕೆಂದಾದರೆ ಎರಡು ಗಾಲಿಗಳು ಸರಿ ಇರಬೇಕಾಗತ್ತದೆ.

ಒಂದು ದೊಡ್ಡದು ಒಂದು ಸಣ್ಣದು ಆದರೆ ರಥ ಗುರಿ ಮುಟ್ಟುವುದಕ್ಕೆ ಸಾಧ್ಯವಿಲ್ಲ. ಮುಗ್ಗರಿಸಿ ಹೊಂಡಕ್ಕೆ ಬೀಳುತ್ತದೆ. ಹಾಗೆಯೇ ಸಂಸಾರ ಎಂಬ ರಥಕ್ಕೆ ದಂಪತಿಗಳೆಂದರೆ ಎರಡು ಗಾಲಿಗಳಿದ್ದಂತೆ. ಅಲ್ಲಿ ಹೆಚ್ಚು ಕಡಿಮೆ ಎನ್ನುವ ಬೇಧಭಾವ ಸಲ್ಲದು. ಈ ಲೋಕದಲ್ಲಿರುವ ಅನೇಕ ಗಂಡಸರಿಗೆ ಮದುವೆಯ ಅರ್ಥವೇ ತಿಳಿಯದು. ಮದುವೆಯೆನ್ನುವುದು ವ್ಯಾವಾಹಾರಿಕವಾದ ಒಂದು ಸಂಬಂಧವಲ್ಲ. ಮದುವೆ ಎನ್ನುವುದು ಮಕ್ಕಳನ್ನು ನಿರ್ಮಾಣ ಮಾಡುವುದಕ್ಕೆ ಎರಡು ಯಂತ್ರಗಳನ್ನು ಒಂದುಗೂಡಿಸುವ ಒಂದು ಸಮಾರಂಭವಲ್ಲ. ಮದುವೆಗೆ ವಿಶಿಷ್ಟವಾದ ವಿಶೇಷವಾದ ಅರ್ಥವಿದೆ. ಒಂದೇ ಜೀವನು ಗಂಡು ಹೆಣ್ಣು ಎಂಬ ಎರಡು ರೂಪದಿಂದ ಕಾಣಿಸಿಕೊಂಡು ಹೊಂದಿ ಒಂದಾಗುವುದನ್ನೇ ದಾಂಪತ್ಯಧರ್ಮ ಎಂದು ಕರೆದಿದ್ದಾರೆ. ಅಲ್ಲಿ ಹೆಚ್ಚು ಕಡಮೆ ಶ್ರೇಷ್ಠರು, ಕನಿಷ್ಠರು, ಜೇಷ್ಠರು, ನಿಕೃಷ್ಠರು ಎಂಬ ಭಾವನೆ ಇರಕೂಡದು. ಹೆಂಗಸರನ್ನು ನಿಕೃಷ್ಠವಾಗಿ ಕಾಣುವುದನ್ನು ಕಂಡು ನೊಂದು ನಾವು ಸ್ತ್ರೀ ರಾಜ್ಯವನ್ನು ಸ್ಥಾಪಿಸಿದೆವು. ಎಲ್ಲಿ ನೋಡಿದರೂ ಸ್ತ್ರೀಯರೇ, ಮಂತ್ರಿಣಿಯಾಗಿ ಭ್ರಮರಕುಂತಳೆ, ಸೇನಾನಾಯಕಿಯಾಗಿ ಕಮಲಗಂಧಿ, ಆಯಾಯ ಸ್ಥಾನದಲ್ಲಿದ್ದು ಅತ್ಯುತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದೀರಿ. ಸಣ್ಣ ಸಣ್ಣ ಶಕ್ತಿಯೂ ಸಮ್ಮಿಲನಗೊಂಡು ಪ್ರಚಂಡ ಶಕ್ತಿಯ ಸಾಗರವಾಗಿಯೇ ಮಾರ್ಪಟ್ಟಿದೆ. ಯಾವ ಪುರುಷನ ಅಗತ್ಯ ಅವಶ್ಯಕತೆ ನಮಗಿಲ್ಲ. ಪುರದ ಹೊರವಲಯದಲ್ಲೇ ಬರೆದಿರಿಸಿದ್ದೇವೆ. ಅರಿತೋ ಅರಿಯದೆಯೋ ಪುರುಷರು ನಮ್ಮ ಪುರವನ್ನು ಪ್ರವೇಶಿಸಿದರೆ ಅಂತವರನ್ನು ಚಿತ್ರ ಹಿಂಸೆಗೆ ಗುರಿಪಡಿಸುತ್ತೇವೆ. ಎಂದು. --- ಯಾರದು?

ಭ್ರಮರೆಕುಂತಳೆ : ಆಳುಗಳಿದ್ದಾಗ ಆಳುವವರು ಹೋಗುವುದು ಭೂಷಣವಲ್ಲ –ನಾವಿದ್ದೇವೆ.

ಶಶಿಪ್ರಭೆ : ಭ್ರಮರೆಕುಂತಳೆ, ಸರಿಯಾದ, ಸೂಚನೆಯನ್ನು ಸಕಾಲದಲ್ಲಿ ಕೊಟ್ಟಿದ್ದಿ. ಇಗೋ, ಧುರವೀಳ್ಯವನ್ನು ಕೊಟ್ಟಿದ್ದೇನೆ. ಆದರೆ ಒಂದು ಎಚ್ಚರಿಕೆ. ಈ ಪ್ರಕರಣವನ್ನು ಲಘುವಾಗಿ ಭಾವಿಸುವುದಕ್ಕೆ ಸಾಧ್ಯವಿಲ್ಲ. ಯಾಕೆಂದರೆ ನಮಗವರು ನೇರವಾಗಿ ಯುದ್ಧಾಹ್ವಾನವನ್ನು ಕೊಟ್ಟಿದ್ದಾರೆ. ನಾವಿಟ್ಟ ಆಳುಗಳಿಗೆ ಹೊಡೆಯುವುದು, ತುರುಗಳನ್ನು ಹಿಡಿಯುವುದು, ಸಂಪತ್ತನ್ನು ಸೆಳೆಯುವುದು ಇದೆಲ್ಲಾ ನೇರವಾಗಿ ಯುದ್ಧಾಹ್ವಾನ. ವೃದ್ಧೆಯನ್ನು ಹೊಡೆಯುವುದರ ಮೂಲಕ ಯುದ್ಧಹ್ವಾನ ಕೊಟ್ಟಿದ್ದಾರೆ. ಆದ್ದರಿಂದ ಅಡಿಗಡಿಗೆ ನಾವು ಯೋಚಿಸಬೇಕಾಗುತ್ತದೆ. ಕೇವಲ ಭುಜಬಲವನ್ನೇ, ಪರಾಕ್ರಮವನ್ನೇ ನಂಬಿ ಬಂದಿದ್ದಾರೆ ಎಂದು ಭಾವಿಸಲು ಸಾಧ್ಯವಿಲ್ಲ. ಹಿನ್ನಲೆಯಲ್ಲಿ ಯಾರ ಸಹಾಯವಿದೆಯೋ ಯಾರಿಗೆ ಗೊತ್ತು. ಆದ್ದರಿಂದ ನಾವು ಜಾಗ್ರುತರಾಗಿಯೇ ಇರಬೇಕಾಗುತ್ತದೆ. ಬಂದವರು ಅನಕ್ಷರಸ್ಥರಾಗಿರುವುದಕ್ಕೆ ಸಾಧ್ಯವಿಲ್ಲ. ಹೊರವಲಯದಲ್ಲಿ ಬರೆದಿರಿಸಿದ್ದನ್ನು ಓದಿಯೂ ಮುಂದೆ ಬಂದಿದ್ದಾರೆ ಎಂದಾದರೆ ಯುದ್ಧಕ್ಕೆ ನಿಮ್ಮನ್ನು ಕಳುಹಿಸುವಾಗ ನಾನು ಯೋಚಿಸಬೇಕಾಗುತ್ತದೆ. ಆದ್ದರಿಂದ ನಿಮಗೂ ಅಪಾಯ ಸಂಭವಿಸಬಾರದು. ಒಂದು

ವೇಳೆ ಅಪಾಯ ಸಂಭವಿಸಿದರೆ ಅಲ್ಲಿಂದ ಪಾರಾಗುವುದಕ್ಕೆ ಅಮೂಲ್ಯ ಸಂಪತ್ತುಗಳಲ್ಲಿ ಒಂದು ಅದೃಶ್ಯಾಂಜನ. ಇಗೋ ಅದನ್ನು ನಿನ್ನ ಅದೀನಕ್ಕೆ ಕೊಡುತ್ತೇನೆ. ಜಾಗ್ರತೆಯಲ್ಲಿ ಇಟ್ಟಿಕೋ. ಮುಂದುವರೆದು ಬಂದರೆ ನಾ ನೋಡಿಕೊಳ್ಳುತ್ತೇನೆ. ಮತ್ತೊಂದು ಮಾತು, ಬಂದ ಯುವಕರು 18–20–25 ವರ್ಷದವರು. ನೀವು ಅದೇ ವಯಸ್ಸಿನ ಯುವತಿಯರು. ಯುವಕರನ್ನು ಕಂಡವರಲ್ಲ ನಾವು. ಎಲ್ಲಿಯಾದರೂ ಚಿಗುರು ಮೀಸೆಯ ಯುವಕರುನ್ನು ಕಂಡು ಚಿತ್ತ ಚಾಂಚಲ್ಯಕ್ಕೆ ಒಳಗಾದಿರಿ ಎಂಬ ಸುದ್ದಿ ಬಂದರೆ ಅಂತವರನ್ನು ಚಿತ್ರಹಿಂಸೆಗೆ ಗುರಿಪಡಿಸುತ್ತೇನೆ.

(ಘೋರ ರೂಪಿಯನ್ನು ಕಳುಹಿಸುವಾಗ) ಯಾರನ್ನು ಹೂವೆಂದು ಭಾವಿಸಿದ್ದೇನೆಯೂ ಅವಳು ಹಾವಿನಂತಾದಳು.

ಯಾರನ್ನು ಹಾಲೆಂದು ಭಾವಿಸಿದ್ದೇನೆಯೂ ಅವಳು ಹಾಲಾಹಲದಂತಾದಳು.

ಯಾರ ಮೇಲೆ ನಾನು ಅತಿಯಾದ ವಿಶ್ವಾಸವಿಟ್ಟೆನೋ ಅವಳು ಎನಗೆ ದ್ರೋಹ ಬಗೆದಳು. ಹುಡುಗರನ್ನು ಕಟ್ಟಿತರುತ್ತೇನೆಂದ ಭ್ರಮರಕುಂತಳೆ ಅವರೊಂದಿಗೆ ಚಕ್ಕಂದವಾಡುತ್ತಿದ್ದಾಳೆ. ಕೇಳಿ ಸಹಿಸುವುದಕ್ಕೆ ಸಾಧ್ಯವಿಲ್ಲ. ಈ ಕಣ್ಣಗಳಿಂದ ಆ ದೃಶ್ಯವನ್ನು ಕಾಣಲಾರೆ ಹಾಗೆಂದು ಅವಳನ್ನು ಶಿಕ್ಷಿಸದೇ ಬಿಡಲಾರೆ. ಇದ್ದಾನಲ್ಲಾ ಘೋರರೂಪಿ ಅವನನ್ನೇ ಕರೆದು ಎಳೆತರಲು ಕಳುಹುತ್ತೇನೆ.

(ಶಯ್ಯಾಗಾರದಲ್ಲಿ ಹಾರ ಕಾಣೆಯಾದಾಗ) ಆರಕೈಸೇರಿತೋ ಶಿವಾ ಶಿವಾ ಇದೇನು? ಎಂದಿನಂತೆ ಮಂಚದ ಮೇಲೆ ಮಲಗುವಾಗ, ಹಾರವನ್ನು ಮಂಚದ ಕೈಗೆ ಸಿಕ್ಕಿಸಿಟ್ಟವಳು. ಎಚ್ಚರವಾಗಿ ನೋಡಿದರೆ ಹಾರ ಎಲ್ಲಿಯೂ ಕಾಣಿಸ್ತಾ ಇಲ್ಲ. ನನ್ನ ಹಾರ ಎಲ್ಲಿ ಹೋಯ್ತು?. ಯಾರು ನನ್ನ ಹಾರವನ್ನು ಅಪಹರಿಸಿದರು?. ಕಳ್ಳರು ನನ್ನ ಅಂತಃಪುರ ಪ್ರವೇಶಿಸಲು ಸಾಧ್ಯವೇ ಇಲ್ಲ. ಹಾಕಿದ ಬಾಗಿಲು ಹಾಕಿದ ಹಾಗೇ ಇದೇ, ನಮ್ಮ ನಾರಿಯರು ವಿನೋದಕ್ಕಾಗಿಯೂದರೂ ನನ್ನ ಅಂತಪುರವನ್ನು ಪ್ರವೇಶಿಸಲಾರರು ಹಾರವೇ ಹೋದರೆ ನನ್ನ ಗತಿ ಏನು, ನನ್ನ ಕಥೆ ಏನು? ಈ ದೇಶದ ಮಹಾರಾಣಿಯಾಗಿ ನಾನು ಮೆರೆದಾಡಿದ್ದಿದ್ದರೆ, ಎಲ್ಲೆಡೆಯಲ್ಲಿಯೂ ಶಶಿಪ್ರಭಾ ಶಶಿಪ್ರಭಾ ಎಂಬ ಕೀರ್ತಿಗೆ ಪಾತ್ರಳಾದದ್ದಿದ್ದರೆ ಅದು ಹಾರದ ಪ್ರಭಾವದಿಂದ. ಹಾರವೇ ಹೋಯ್ತು ಅಂತಾದರೆ, ಹಲ್ಲು ಮುರಿದ ಹಾವಿನಂತೆ. ಕಾಲುಮುರಿದ ವ್ಯಕ್ತಿಯಂತೆ. ಅಮ್ಮ ನೀನೇ ರಕ್ಷಿಸು ತಾಯಿ.–
–

# "ಚಂದ್ರಾವಳಿ" ವಿಲಾಸ.

ಜಾಣೆ ಚಂದ್ರಾವಳಿ ಎಂದು ನನ್ನ ವಿಷಯಕವಾಗಿ ಅನೇಕರು ಆಡಿಕೊಳ್ಳುತ್ತಿದ್ದಾರೆ. ಜಾಣತನ ಇಲ್ಲದೆ ಇದ್ದರೆ ಇವರೆಡೆಯಲ್ಲಿ ಬದುಕುವುದಾದರೂ ಹೇಗೆ? ನಿಂತರೆ ನಿಂತದ್ದೇ ತಪ್ಪೆಂದು ಆಕ್ಷೇಪಿಸುವ ಅತ್ತೆ. ಕೂತರೆ ಕೂತದ್ದೆ ತಪ್ಪೆಂದು ಹಿಡಿದು ಬಡಿದು ದಂಡಿಸುವ ಗಂಡ, ಇವರೆಡೆಯಲ್ಲಿ ಬದುಕಬೇಕು ಅಂತಾದರೆ ಜಾಣತನ ಬೇಕೇಬೇಕು. ಕುಳಿತರೆ ಕುಳಿತದ್ದೆ ತಪ್ಪೆಂದು ಹೇಳುವರ ಎದುರ್ಗಡೆಯಲ್ಲಿ ನಿಂತಿರಬೇಕು, ನಿಂತರೆ ನಿಂತದ್ದೇ ತಪ್ಪೆಂದು ಹೇಳುವರ ಎದುರ್ಗಡೆಯಲ್ಲಿ ಕುಳಿತಿರಬೇಕು. ಹೀಗೆ ಅವರ ಮನಸ್ಥಿತಿಗೆ ಹೊಂದಿಕೊಂಡು ಬದುಕಿದ ನನ್ನ ಜಾಣತನವನ್ನು ಕಂಡ ಜನ ಜಾಣೆ ಚಂದ್ರಾವಳಿ, ಚಂದ್ರಾವಳಿ ಜಾಣೆ ಎಂದಾಡಿದರು. ಯಾರು ಏನು ಹೇಳುತ್ತಾರೆ ಎಂಬುದು ಮುಖ್ಯವಲ್ಲ, ನಾವು ಹೇಗೆ ಬದುಕಬೇಕೆಂಬುದು ಮುಖ್ಯ. ಎಳೆಯ ವಯಸ್ಸಿನಲ್ಲಿ ನನ್ನಮ್ಮ ಕುಲವತಿ ನಂದಗೋಕುಲದ ಸಿಂಧು ಗ್ರಾಮದ ಚಂದಗೋಪನಿಗೆ ನನ್ನನ್ನು ಮದುವೆ ಮಾಡಿಕೊಟ್ಟಳು. ಮದುವೆಯಾದ ಬಳಿಕ ಒಂದು ದಿನವೂ ನಾನು ತವರುಮನೆ ಅಂತ ಹೋದದ್ದಿಲ್ಲ. ಹಾಗೆಂದು ಮದುವೆ ಮಾಡಿ ಕೊಟ್ಟಲ್ಲಿಗೆ ನನ್ನಮ್ಮ ಕೈ ತೊಳೆದುಕೊಂಡಳು ಅಂತ ಅರ್ಥವಲ್ಲ. ಅನೇಕ ಬಾರಿ ನನ್ನನ್ನು ಕರೆಯುವುದಕ್ಕೆ ಬಂದರೂ ನನ್ನತ್ತೆ ಮತ್ತು ನನ್ನ ಗಂಡ ನನ್ನನ್ನು ಕಳುಹಿಕೊಡಲು ಒಪ್ಪಲಿಲ್ಲ. ಯಾಕೆ ಏನು ಎಂಬುದು ನನಗೆ ತಿಳಿದಿರಲಿಲ್ಲ. ತಿಳಿದುಕೊಳ್ಳುವ ಅಗತ್ಯವೂ ಇರಲಿಲ್ಲ, ಆದರೆ ಮೊನ್ನೆ ದಿನ ಬಂದ ನನ್ನಮ್ಮ ಕಳುಹಿಕೊಡಲೇಬೇಕೆಂದು ಹಠ ಹಿಡಿದು ಕುಳಿತಳು. ಮೂರು ದಿನದ ಮಟ್ಟಿಗೆ ಕಳುಹಿಕೊಡುವುದೆಂದು ತೀರ್ಮಾನವಾಯ್ತು. ಆಗ ಹಿಂದೆ ನನ್ನನ್ನೂ ಯಾಕೆ ಕಳುಹಿಕೊಡಲಿಲ್ಲ ಎಂಬುದು ಮನವರಿಕೆಯಾಯ್ತು. ಹೇಳಿದಿರಲ್ಲಾ ನನ್ನ ಗಂಡ ಮತ್ತು ಅತ್ತೆ, ಕಳ್ಳ ಕೃಷ್ಣನ ಕಣ್ಣ ದೃಷ್ಟಿಗೆ ಕೊಟ್ಟ ಸುದ್ದಿಯ ಕೇಳ್ದೆನಾದರೆ ಮುಟ್ಟೆನವಳನು ಮನೆಯ ಬಾಗಿಲ ಮೆಟ್ಟಗೊಡೆನು. ಎಲ್ಲಿಯಾದರೂ ಕೃಷ್ಣ ಮುಟ್ಟಿದರೆ, ಕುಚೇಷ್ಟೆ ಮಾಡಿದರೆ, ಕಣ್ಣು ಹಾರಿಸಿದ ಎಂಬ ಸುದ್ದಿ ನಮಗೆ ಸಿಕ್ಕಿದರೆ ನಮ್ಮನೆ ಹೊಸ್ತಿಲು ದಾಟಲಿಕ್ಕಿಲ್ಲ. ಹೀಗೆ ಹೇಳಿ ನಿಬಂದನೆ ಹೇರಿ ನನ್ನನ್ನು ಕಳುಹಿಸಿಕೊಟ್ಟರು. ಹಗಲು ಹೊತ್ತಿನಲ್ಲಿ ಕರೆದುಕೊಂಡು ಬರುವ ಧೈರ್ಯವಾದರೂ ನನ್ನಮ್ಮನಿಗಿದೆಯೇ, ರಾತ್ರಿಯ ಹೊತ್ತಿನಲ್ಲಿ ದೀಪದ ಬೆಳಕಿನಲ್ಲಿ ಕರೆದುಕೊಂಡು ಬಂದರು. ನನ್ನ ಪ್ರಾರಬ್ಧ ನೋಡಿ? ಮೊನ್ನೆ ಬಂದದ್ದು. ನಿನ್ನೆ ಒಂದು ದಿನ ಕಳೆಯಿತು. ಇವತ್ತು ಬೇಸರ ಆವರಿಸಿಬಿಟ್ಟಿದೆ. ಆದ್ದರಿಂದ ಆಚೀಚೆ ಮನೆಯ ಹೆಂಗಸರನ್ನು ಕೂಡಿಕೊಂಡು ವನ ಪ್ರದೇಶಕ್ಕಾದರೂ ಹೋಗಿ ಬರುತ್ತೇನೆ ಅಮ್ಮ ಎಂದು ಹೇಳಿದೆ. ಆಗ ನನ್ನಮ್ಮನನ್ನು ನೋಡಬೇಕಿತ್ತು. ಕೈ ಕಾಲು ಗಡಗುಟ್ಟಿ ನಡುಗುತ್ತಿತ್ತು. ಕಂಠ ಗದ್ಗದಿತವಾಗಿತ್ತು. ನಾಲಿಗೆಯಲ್ಲಿ ಶಬ್ದೋಚ್ಚಾರವೇ ಆಗುತ್ತಿರಲಿಲ್ಲ. ಯಾಕಮ್ಮ ಇಷ್ಟು ಭಯ ಅಂತ ಕೇಳಿದರೆ ಲೋಕದಲ್ಲಿರುವ

ಗಂಡಸರೆಲ್ಲ ಕೆಟ್ಟವರು, ಕಾಮಾಂಧರು, ವಿಷಯಲಂಪಟರು, ಹೆಂಗಸರನ್ನು ನೋಡಿದರೆ ಬಿಡುವುದಿಲ್ಲ. ಅವರ ಶೀಲ ಕೆಡಿಸುತ್ತಾರೆ ಹೀಗೆ ಒಂದೇ ಸವನೆ ಗಂಡಸರನ್ನು ಆಕ್ಷೇಪಿಸಲು ಆರಂಭ ಮಾಡಿದಳು. ಆಗ ನನ್ನಮ್ಮನಲ್ಲಿ ಒಂದು ಪ್ರಶ್ನೆ ಮಾಡಿದೆ. "ಅಮ್ಮಾ ಗಂಡಿನಿಂದ ಹೆಣ್ಣು ಕೆಡುವುದೋ, ಹೆಣ್ಣಿನಿಂದ ಗಂಡು ಕೆಡುವುದೋ" ಎಂದು? "ಗಂಡಸರೇ ಹೆಂಗಸರನ್ನು ಹಾಳು ಮಾಡುವುದೆಂದು" ಅಮ್ಮ ಹೇಳಿದಳು. ನಾನದನ್ನು ಒಪ್ಪಲಿಲ್ಲ. "ಗಂಡಸರು ಹೆಂಗಸರನ್ನು ಹಾಳು ಮಾಡುವುದಲ್ಲ. ಹೆಂಗಸರೇ ಗಂಡಸರನ್ನು ಹಾಳು ಮಾಡುವುದೆಂದು" ವಾದಿಸಿದೆ. ಅಮ್ಮ ಕೇಳಿದಳು "ಯಾಕೆ ಮಗಳೆ ಹೀಗೆಲ್ಲ ವಾದ ಮಾಡುತ್ತೀ?" ಎಂದು "ನೋಡಮ್ಮ ಕೆಲವು ಹೆಂಗಸರು ಮನೆಯಲ್ಲಿರುವಾಗ, ಕಪ್ಪು ಸೀರೆಯನ್ನುಟ್ಟುಕೊಂಡು, ತಲೆಯನ್ನು ಸರಿಯಾಗಿ ಬಾಚಿಕೊಳ್ಳದೆ, ತಿಲಕವನ್ನು ಇಟ್ಟುಕೊಳ್ಳದೆ ತಲೆ ಕೂದಲನ್ನು ಕೆದರಿಕೊಂಡು ರಾಕ್ಷಸಿಯ ಹಾಗೆ ಮಾರಿಯ ಹಾಗೆ ಕಾಣಿಸಿಕೊಳ್ಳತ್ತಾರೆ. ಅದೇ, ತಿರುಗಾಟಕ್ಕೆ ಹೊರಟರೆ ಪೆಟ್ಟಿಗೆಯಲ್ಲಿ 25 ಸೀರೆ ಇದ್ದರೂ ಅದರಲ್ಲಿ ಯಾವುದು ಒಳ್ಳೆಯದಂದು ಹುಡುಕಿ ಉಟ್ಟುಕೊಳ್ಳುತ್ತಾರೆ. ಅವರ ಆಭರಣ ಸಾಕಾಗುವುದಿಲ್ಲ. ಆಚೀಚೆ ಮನೆಯವರಿಂದಲೂ ಬೇಡಿ ಹಾಕಿಕೊಳ್ಳುತ್ತಾರೆ. ದಾರಿಯಲ್ಲಿ ಹೋಗುವಾಗ ಸುಮ್ಮನೆ ಹೋಗುತ್ತಾರಾ? ಆಚೀಚೆ ಯಾರು ನಮ್ಮನ್ನು ನೋಡುತ್ತಾರೆಂತ ಅತ್ತಿತ್ತ ನೋಡುತ್ತಾ ಹೋಗುತ್ತಾರೆ. ದಾರಿಯಲ್ಲಿ ಒಬ್ಬಿಬ್ಬರು ಗಂಡಸರಿದ್ದರೆ ಮತ್ತೆ ಕೇಳುವುದೇ ಬೇಡ. ಅವ ಹತ್ತಿರ ಬರುವಾಗ ತಮ್ಮ ತಮ್ಮಲ್ಲೇ ಗುಸುಗುಸು ಮಾತಾಡುವುದು ಪಿಸುಪಿಸು ನಗಾಡುವುದು. ಆಗ ಅವನಿಗೆ ಸಹಜವಾಗಿ ಆಸಕ್ತಿ ಮೂಡುತ್ತದೆ. ಹಾಗೆ ಮುಂದೆ ಹೋದ ಅವರು ನಮ್ಮನ್ನು ನೋಡ್ತಾನಾ ಅಂತ ಹೀಗೆ ಹಿಂದೆ ತಿರುಗಿ ನೋಡುತ್ತಾರೆ. ಅವನಿಗೆ ಆಗಲೇ ಆಸಕ್ತಿ ಮೂಡಿದ್ದರಿಂದ ಅವನೂ ತಿರುಗಿ ನೋಡುತ್ತಾನೆ. ಹಾಗೆ ಅವನೂ ಇವರ ಬೆನ್ನು ಹಿಡಿದು ಹೋಗಿ ಏನೇನೋ ಆಗುತ್ತದೆ. ಆಮೇಲೆ ಅವಳು ಆಕ್ಷೇಪಿಸುವುದು ಯಾರನ್ನು? ಗಂಡಸನ್ನು. ಅವ ನೋಡಿದ ಹಾಗೆ ಮಾಡಿದ ಹೀಗೆ ಮಾಡಿದ ಎಂದು ಆಕ್ಷೇಪಿಸುವುದು. ಅವ ನೋಡಿದ್ದು ಇವಳಿಗೆ ಹೇಗೆ ಗೊತ್ತಾಯ್ತು? ಇವಳೂ ನೋಡಿದ್ದರಿಂದತಾನೇ. ಆ ಗಂಡನ್ನು ಹಾಳು ಮಾಡಿದವಳು ಇವಳೇ. ಇದನ್ನು ಯಾಕೆ ಹೇಳಿದೆ?. ತನ್ನ ದೃಢ ತನಗಿರಲು ಅನ್ಯರ ಸನ್ನೆ-ಚೇಷ್ಟೆಗಳೇನ ಮಾಳ್ಪವು? ನಾವು ಎಲ್ಲಿಗೆ ಹೊರಟಿದ್ದೇವೆ ಯಾಕೆ ಹೊರಟಿದ್ದೇವೆ ಎಂಬ ಗುರಿ ನಿರ್ಧಾರವಿದ್ದರೆ ಯಾರಿಂದ ಏನು ಮಾಡಲೂ ಸಾಧ್ಯವಿಲ್ಲ. ಯಾವ ಗಂಡಸರು ಬರಲಿ ನಾ ನೋಡಿಕೊಳ್ಳುತ್ತೇನೆ ಅವನನ್ನು. "ಅಂತ ಹೇಳಿದಾಗ ಅಮ್ಮ ಬಾಯಿ ಬಿಟ್ಟಳು. "ಒಬ್ಬ ಕೃಷ್ಣನ ದೆಸೆಯಿಂದ ಬದುಕುವ ಹಾಗಿಲ್ಲ. ವಯಸ್ಸಾದವರು, ಆಗದಿದ್ದವರು ಅಂತ ಬೇಧವಿಲ್ಲ ಅವನಿಗೆ. ಯಾರನ್ನು ನೋಡಿದರೂ ಬಿಡುವುದಿಲ್ಲ ಅವ "ಆಗ ನಾ ಹೇಳಿದೆ "ಇದಕ್ಕೆಲ್ಲ ನೀವೇ ಕಾರಣರು. ಕೃಷ್ಣ ಕಾರಣನಲ್ಲ. ಯಾಕೆಂದರೆ ಬೆಕ್ಕಿನಂದಿದಿ ಬಂದು ಮನೆ ಮನೆ ಪೊಕ್ಕು ಲೂಟಿಯ ಗೈವ ಸಮಯದಿ ಸೊಕ್ಕ ಮುರಿಯದೆ

ಬೆದರಿ ಪುಂಡಗೆ ಇಕ್ಕಿದಿರಿ ಪಥವ. ಅಕ್ಕ ರಾಧೆಯ, ಪುರದೊಳಿರುತಿಹ ಮಿಕ್ಕ ನಾರಿಯರೆಲ್ಲ ಕೃಷ್ಣನ ಠಕ್ಕು ಠೌಳಿಗೆ ಸಿಕ್ಕಿ ವಶವಾದಂತೆ ನಾನವಗೆ ದಕ್ಕ ಬಲ್ಲೆನೆ ತಾಯೆ. ಮಿಕ್ಕಿ ಮೀರುತ ಬಂದನಾದರೆ ಎಕ್ಕ ಸೊಕ್ಕನು ಮುರಿದು ಕಲಿಸುವೆ ತಕ್ಕ ಪಾಠಗಳ. ಕೃಷ್ಣ ಹಾಗೆ ಮಾಡಿದ ಹೀಗೆ ಮಾಡಿದ. ಎಲ್ಲ ಅವಕಾಶ ಕೊಟ್ಟವರು ನೀವೆ. ಮೊದಲು ಮೊಸರು ಕದ್ದ, ಬೆಣ್ಣೆ ಕದ್ದ, ಸೀರೆ ಕದ್ದ, ಕಡೆಗೆ ಹೆಂಗಸರನ್ನೇ ಕಳಲು ಆರಂಭ ಮಾಡಿದ. ಆಗ ನಿಮಗದೆಲ್ಲ ಚೆಂದ ಕಂಡಿತು. ಆಗಲೇ ಬೆನ್ನಿಗೆ ಬಾರಿಸಿದ್ದರೆ, ಕೈ ಕಾಲು ಮುರಿದಿದ್ದರೆ ಇಂತಹ ಪರಿಸ್ಥಿತಿ ಬರುತ್ತಿತ್ತಾ? ಹೋಗಲಿ ಬಿಡು. ಮಿಕ್ಕುಳಿದ ನಾರಿಯರ ಹಾಗೆ ಚಂದ್ರಾವಳಿ ಅಂತ ಭಾವಿಸಿ ಬಂದರೆ ಅವನ ಹಲ್ಲು ಉದುರಿಸುತ್ತೇನೆ, ಕಣ್ಣು ಕೀಳುತ್ತೇನೆ. ಕೈ ಕಾಲು ಮುರಿತ್ತೇನೆ. ಅವನಿಗೆ ತಕ್ಕ ಪಾಠ ಕಲಿಸುತ್ತೇನೆ. "ಇಷ್ಟು ಹೇಳಿದ ಮೇಲೆ ಅಮ್ಮನಿಗೊಂದಷ್ಟು ಧೈರ್ಯ ಬಂತು. "ಹೋಗಿ ಬಾ ಮಗಳೆ" ಅಂತ ಹೇಳಿದಳು. ಹೊರಟು ನಿಂತಿದ್ದೇನೆ. ಕೃಷ್ಣ ಒಮ್ಮೆ ಸಿಗಲಿ ನನಗೆ. ಹೇಗೆ ಬುದ್ದಿ ಕಲಿಸ್ತೇನೆ ನೋಡಿ. ನನಗೂ ಆತ ಒಮ್ಮೆ ಸಿಗಬೇಕು ಅಂತ ಇತ್ತು.

## "ವೃತ್ತಿ ಬದುಕಿನ ಹಿನ್ನೋಟ"

ಶ್ರೀಯುತ ಎಂ.ಎ ನಾಯ್ಕರದು ಸುಮಾರು ನಲವತ್ತು ವರ್ಷಗಳ ಮೇಳದ ತಿರುಗಾಟ. ಅದರಲ್ಲಿ ಪ್ರಾರಂಭದ 18 ವರ್ಷಗಳು ಅಮೃತೇಶ್ವರಿ ಮೇಳ ನಂತರದ ಮೂರು ವರ್ಷ ಮೂಲ್ಕಿ ಮೇಳ, ನಂತರದ ಒಂದು ವರ್ಷ ಮಂದರ್ತಿ, ಎರಡು ವರ್ಷ ಶಿರಸಿ ಪಂಚಲಿಂಗೇಶ್ವರ ಮೇಳ, ಬಳಿಕ ಇಡಗುಂಜಿ ಮೇಳದಲ್ಲಿ ಒಂದು ವರ್ಷ, ಶಿರಸಿ ಮಾರಿಕಾಂಬ ಮೇಳದಲ್ಲಿ ಎರಡು ವರ್ಷ, ಬಳಿಕ ಮಂದರ್ತಿಯಲ್ಲಿ 13 ವರ್ಷ. ಒಟ್ಟು ಸುಮಾರು ನಲವತ್ತು ವರ್ಷಗಳ ತಿರುಗಾಟದ ಬಳಿಕ ಇದೀಗ ನಿವೃತ್ತಿ. ಮಾರಣಕಟ್ಟೆ ಮೇಳದಲ್ಲಿ ಅತಿಥಿ ಕಲಾವಿದ, ಸಾಲಿಗ್ರಾಮ ಮೇಳದಲ್ಲೂ ಅತಿಥಿ ಕಲಾವಿದನಾಗಿ, ಮುಂಬೈ–ಬೆಂಗಳೂರು ನಗರದಲ್ಲೂ ತಿರುಗಾಟವಿತ್ತು.

ಇವರ ಪ್ರಸಿದ್ಧಿಯ ಕಾಲದಲ್ಲಿ ತೆಂಕು–ಬಡಗು ಕೂಡಾಟ ಒಂದು ಯಶಸ್ವಿ ಪ್ರಯೋಗವಾಗಿತ್ತು. ಮಣಿಪಾಲದಲ್ಲಿ ಗೋಲ್ಡನ್ ಜ್ಯುಬಿಲಿ ಹಾಲ್ ಮತ್ತು ಮಂಗಳೂರಿನ ಪುರಭವನಗಳಲ್ಲಿ ಮಳೆಗಾಲದ ಪ್ರತಿ ಶನಿವಾರ– ಭಾನುವಾರಗಳಲ್ಲಿ ಆಟ ನಡೆಯುತ್ತಿದ್ದವು. ಕುಂಬಳೆ ಸುಂದರ ರಾಯರ ತೆಂಕಿನ ಸುಧನ್ವನಿಗೆ ಇವರ ಬಡಗಿನ ಪ್ರಭಾವತಿ ಪ್ರಸಿದ್ಧ ಸಂಯೋಜನೆಯಾಗಿತ್ತು. ತೆಂಕು ಬಡಗು ಹಿಮ್ಮೇಳಗಳೂ ಮೋಡಿ ಮಾಡುತ್ತಿದ್ದವು. ಇಂತಹ ಕೂಡಾಟಗಳಲ್ಲಿ ಶಿರಿಯಾರ ಮಂಜುನಾಯ್ಕರು, ಮಂದರ್ತಿ ಅಣ್ಣು ನಾಯ್ಕರು ಅನಿವಾರ್ಯ ಕಲಾವಿದರಾಗಿದ್ದರು.

ಇಂತಹ ಮಳೆಗಾಲದ ಒಂದು ಕಾರ್ಯಕ್ರಮ ಮಣಿಪಾಲದ ಗೋಲ್ಡನ್ ಜ್ಯುಬಿಲ್ ಹಾಲ್‌ನಲ್ಲಿ. ಭೀಷ್ಮ ವಿಜಯ–ಗದಾಯುದ್ಧ, ಶಿರಿಯಾರ ಮಂಜುನಾಯ್ಕರದು ಪರಶುರಾಮ ರಂಗದಲ್ಲೇ ಕುಸಿಯುವ ಕಾಲಕ್ಕೆ ಚೌಕಿಯಲ್ಲಿ ಎಂ.ಎ.ನಾಯ್ಕರ ಗದಾಯುದ್ಧದ ಕೃಷ್ಣ ಸಿದ್ಧಗೊಳ್ಳುತ್ತಿತ್ತು. ಪ್ರೇಕ್ಷಕರ ಬೇಸರದ ನಡುವೆ ಆಟ ನಿಂತಿತು. ಅಂದು ಆಟಕ್ಕೆ ಒಟ್ಟಿಗೆ ಹೊರಟ ಹಿರಿಯ ಒಡನಾಡಿಯ ಶವದೊಂದಿಗೆ ಮರಳ ಬೇಕಾದುದು ಮರೆಯಲಾಗದ ಕಹಿ ಘಟನೆ ಎಂದು ಬೇಸರದಿಂದ ಸ್ಮರಿಸಿಕೊಳ್ಳುತ್ತಾರೆ ಎಂ.ಎ.ನಾಯ್ಕರು.

ಇವರ ಕಾಲದ ಇನ್ನೊಂದು ವೈಶಿಷ್ಟ್ಯ ದ್ವಂದ್ವ ಹಿಮ್ಮೇಳದ ಪ್ರಯೋಗ, ಕೋಟ ಅಮೃತೇಶ್ವರಿ ಮೇಳದಲ್ಲಿನ ತಿರುಗಾಟದಲ್ಲಿ ಅಂದಿನ ಜನಪ್ರಿಯ ಕಲಾವಿದರಾಗಿದ್ದ ಚಿಟ್ಟಾಣಿಯವರು ಆ ಮೇಳವನ್ನು ತೊರೆದು ಸಾಲಿಗ್ರಾಮ ಮೇಳ ಸೇರಿದರು. ಟ್ರಂಪ್ ಕಾರ್ಡ್ ಕಲಾವಿದನೊಬ್ಬನ ಅನಿರೀಕ್ಷಿತ ವಲಸೆ ಮೇಳದ ಸಂಪಾದನೆಗೆ ಕುತ್ತು ತರುವ ಸಂದರ್ಭ. ಚಿಟ್ಟಾಣಿಯವರಿಲ್ಲದ ಕೊರತೆಯನ್ನು ಹೇಗಾದರೂ ಮರೆಸಿ ಮೇಳದ ಹೆಸರು ಮತ್ತು ಪ್ರೇಕ್ಷಕರನ್ನೂ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಮೇಳದ ಯಜಮಾನರಾದ ಪಿ. ಶ್ರೀಧರ ಹಂದೆಯವರಿಗೆ ಮತ್ತು ಭಾಗವತ ಶ್ರೀ ನಾರಾಯಣ ಉಪ್ಪೂರರಿಗೆ. ಕೂತು ಸಮಾಲೋಚಿಸಿದಾಗ ಮೂಡಿ ಬಂದ ಪರಿಹಾರವೇ ದ್ವಂದ್ವ ಹಿಮ್ಮೇಳ. ಏಕಕಾಲಕ್ಕೆ ಇಬ್ಬರು ಭಾಗವತರು ಜೋಡಿ ಪಾತ್ರಗಳಿಗೆ ಪದ್ಯ ಹೇಳುವ ಹೊಸ ಪ್ರಯೋಗ

ಆರಂಭವಾಯಿತು. ವಿಶೇಷವಾಗಿ ಸತಿ ಪತಿಯರ ಶೃಂಗಾರ ಸನ್ನಿವೇಷಗಳಿಗೆ ಈ ಪ್ರಯೋಗ ತುಂಬಾ ಹೊಂದಿಕೆಯಾಗುತ್ತಿತ್ತು. ಒಬ್ಬರು ಭಾಗವತರು ಪುರುಷ ವೇಷದ ಪದ್ಯ ಹೇಳಿದರೆ ಇನ್ನೊಬ್ಬರಿಗೆ ಸ್ತ್ರೀ ವೇಷದ ಪದ್ಯ. ಸುಧನ್ವ-ಪ್ರಭಾವತಿ, ಮೋಹನ ತರಗಿಂಣಿಯ ರತಿ-ಮನ್ಮಥ, "ಮಾಯಾ ಮೃಗಾವತಿಯ-ಮೃಗಾವತಿ-ಸಹಸ್ರಾನೀಕ,ಕಂಸ ಜನ್ಮದ ಉಗ್ರಸೇನ ಋಚಿಮತಿ ಇಂತಹ ಆಯ್ದ ಸನ್ನಿವೇಷಗಳಲ್ಲಿ ಈ ಪ್ರಯೋಗಗಳು ನಡೆಯುತ್ತಿದ್ದವು. ಪ್ರಯೋಗ ಯಶಸ್ವಿಯಾಗಲು ಇನ್ನೊಂದು ಪ್ರಬಲ ಕಾರಣ ಗುರು ನಾರಣಪ್ಪ ಉಪ್ಪೂರರೊಂದಿಗೆ ಶಿಷ್ಯ ಕಾಳಿಂಗ ನಾವುಡರ ಭಾಗವತಿಕೆ. ಆ ಕಾಲದಲ್ಲಿ ಸಾಂಪ್ರದಾಯಿಕ ಪ್ರೇಕ್ಷಕರಿಗೆ ನಾರಣಪ್ಪ ಉಪ್ಪೂರರ ಪದ್ಯ ಇಷ್ಟವಾದರೆ ಯುವ ಪೀಳಿಗೆಗೆ ಹುಚ್ಚು ಹಿಡಿಸುವ ಪದ್ಯ ನಾವುಡರದಾಗಿತ್ತು. ಏಕ ಕಾಲಕ್ಕೆ ಎರಡರ ಪ್ರಸ್ತುತಿ ಇಡೀ ಪ್ರೇಕ್ಷಕ ಸಮೂಹವನ್ನೇ ಬೆರಗುಗೊಳಿಸಿತು. ಹಳೆಬೇರು-ಹೊಸ ಚಿಗುರು ಕೂಡಿರಲು ಮರ ಸೊಬಗು, ಅಕ್ಷರಶಃ ಅನ್ವರ್ಥಕವಾಯ್ತು. ಅಂದಿಗೆ ಅಮೃತೇಶ್ವರಿ ಮೇಳ ಮಂದಿರ ತುಂಬಿದ ಪ್ರದರ್ಶನಗಳಿಗೆ ಸಾಕ್ಷಿಯಾಯ್ತು. ಹಿಮ್ಮೇಳ-ಮುಮ್ಮೇಳಗಳ ಅನ್ಯೋನ್ಯತೆ ಎಷ್ಟು ಎರಕವಾಗಿತ್ತೆಂದರೆ ಮುಂದೆ ಇತರ ಮೇಳಗಳಲ್ಲಿಯೂ ಈ ಪ್ರಯೋಗ ನಡೆದರೂ ಪರಿಣಾಮಕಾರಿಯಾಗಲಿಲ್ಲ. ಇಂದಿಗೂ ಅಷ್ಟು ಯಶಸ್ವಿ ಪ್ರಯೋಗ ಅನ್ಯತ ಅಲಭ್ಯ ಎನಿಸುವಷ್ಟು ವಿಶೇಷವಾಗಿತ್ತದು. ಆ ದ್ವಂದ್ವ ಪ್ರಯೋಗ ನಿಜಕ್ಕೂ "ನಭೂತೋನಭವಿಷ್ಯತಿ"

ಶ್ರೀಯುತರ ವೃತ್ತಿ ಜೀವನದ ಇನ್ನೊಂದು ಅವಿಸ್ಮರಣೀಯ ಸ್ಮರಣೆ, ವಿದೇಶ ಯಾನ-ಶ್ರೀ ಕೆ.ಎಸ್. ಉಪಾಧ್ಯಾಯರ ನೇತೃತ್ವದ ಯಕ್ಷಗಾನ ತಂಡದ ಸದಸ್ಯನಾಗಿ ಎರಡು ಬಾರಿ ವಿದೇಶಯಾನ ಕೈಂಗೊಂಡಿದ್ದಾರೆ. 1983ರಲ್ಲಿ ಹಾಂಗ್ ಕಾಂಗ್ ನಲ್ಲಿ ಸುಮಾರು ಒಂದು ತಿಂಗಳ ಪ್ರದರ್ಶನ, ಬಳಿಕ ಇನ್ನೊಂದು ತಿರುಗಾಟದಲ್ಲಿ ಸ್ವಿಡ್ಜರ್‌ಲ್ಯಾಂಡ್, ಜರ್ಮನಿ, ಪೋಲ್ಯಾಂಡ್‌ಗಳಲ್ಲಿ ಪ್ರದರ್ಶನ. ಅಂದಿನ ಆ ತಂಡದಲ್ಲಿ ಭಾಗವತರು, ನೆಲ್ಲೂರು ಮರಿಯಪ್ಪ ಆಚಾರ್.ಮದ್ದಳೆಗಾರರು ಹುಂಚದ ಕಟ್ಟೆ ಶ್ರೀನಿವಾಸ ಆಚಾರ್‌ಮತ್ತು ಬಿರ್ತಿ ಬಾಲಕೃಷ್ಣ, ಚೆಂಡೆ ಕೆಮ್ಮಣ್ಣು ಆನಂದ, ಮುಮ್ಮೇಳದಲ್ಲಿ ಬಣ್ಣದ ಲಕ್ಷ್ಮಿನಾರಾಯಣಯ್ಯ, ಕೋಟ ವೈಕುಂಠ, ಎಂ.ಎ.ನಾಯ್ಕರು, ಐರೋಡಿ ಗೋವಿಂದಪ್ಪ, ಹಾರಾಡಿ ಸರ್ವಗಾಣಿಗ, ದಯಾನಂದ ನಾಗೂರು, ಬೇಲ್ತೂರು ರಮೇಶ ಮುಂತಾದವರು.

ಹೋಗೆ ಬಾರದು ಮಾನಪ್ರಾಣವು.
ಹೋಗಿ ಬರುವುದು ಸಿರಿದರಿದ್ರತೆ.
ಹೋಗಲೊಲ್ಲದು ಬಂದ ಮೇಲೆ ಅಪಕೀರ್ತಿ ಕೀರ್ತಿಗಳು .
ಕೇಳದೆ ಜಾರುವುದು ಬಾಲ್ಯ ಯೌವನ,
ಹೇಳದೇ ಬರುವುದು ಮುಪ್ಪು ಮರಣ













ಗೀತ, ವಾದನ, ನರ್ತನ, ಆಹಾರ್ಯ, ಮತ್ತು ವಾಚಿಕವೆಂಬ ಅವಯವಗಳಿಂದ ಕೂಡಿದ ಕಲೆ ಯಕ್ಷಗಾನ. ಆಶುವಚನ, ಯಕ್ಷಗಾನದ ವೈಶಿಷ್ಟ್ಯ. ವೇಷಧಾರಿ ಕಲಾವಿದ ಮಾತಿನ ಮೂಲಕ ದೃಶ್ಯ ಕಟ್ಟುವ ಅವಕಾಶ ಹೊಂದಿರುತ್ತಾನೆ. ಈ ಬಗ್ಗೆ ಕಲಾವಿದನಲ್ಲಿ ಭಾಷೆಯ ಮೇಲೆ ಹಿಡಿತ, ಸಾಹಿತ್ಯದ ಉತ್ತಮ ಪರಿಜ್ಞಾನ ಹಾಗೂ ಮಾಧ್ಯಮದ ಕುರಿತಾದ ಸಮಗ್ರ ಅರಿವು ಇರಬೇಕಾಗುತ್ತದೆ. ಆದರೆ ಮಾತಿನಲ್ಲಿ ದೃಶ್ಯ ಕಟ್ಟುವ ಹೆಚ್ಚು ಅವಕಾಶ ಇರುವುದು ಸ್ವಗತದಲ್ಲಿ ಮಾತ್ರ. ಸ್ತ್ರೀ ವೇಷಗಳಿಗೆ ಲಭಿಸುವ ಈ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡ ಸ್ತ್ರೀ ವೇಷಧಾರಿಗಳಲ್ಲಿ ಶ್ರೀ ಎಮ್.ಎ ನಾಯ್ಕ್‌ರವರೂ ಒಬ್ಬರು. ನಾನೂ ಅವರ ಶಶಿಪ್ರಭೆ, ದ್ರೌಪದಿ,ಸುಭದ್ರೆ ಮುಂತಾದ ವೇಷಗಳನ್ನು ಕಂಡಿದ್ದೇನೆ. ಮಾತಿನಲ್ಲಿ ನಿರರ್ಗಳತೆ ಇರುವುದಾದರೂ ಅತಿ ವೇಗವೂ ಅಥವಾ ಅತಿ ನಿಧಾನವೂ ಆಗಿರದ ರೀತಿ ಪ್ರೇಕ್ಷಕರನ್ನು ತಕ್ಷಣ ಸೆಳೆಯಬಲ್ಲುದು.

ಲೇಖಕರು, ಎಮ್.ಎ ನಾಯ್ಕ್‌ರವರ ಹತ್ತು ಪ್ರಮುಖ ಸ್ತ್ರೀ ವೇಷಗಳ ಸ್ವಗತ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿದ್ದಾರೆ. ಇದೊಂದು ಸಾಹಸದ ಕೆಲಸವೇ. ಯಾಕೆಂದರೆ ಎಮ್.ಎ ನಾಯ್ಕ್‌ರವರು ಈಗ ವಿಶ್ರಾಂತಿ ಜೀವನವನ್ನು ಸಾಗಿಸುತ್ತಿದ್ದಾರೆ. ದೀರ್ಘಕಾಲ ವೇಷಮಾಡುವುದರಿಂದ ದೂರ ಉಳಿದರೆ ಒಟ್ಟು ಕಲ್ಪನೆ ಮಾತ್ರ ಉಳಿದೀತೇ ಹೊರತು ಸಮಗ್ರ ಚಿತ್ರಣ ಉಳಿಯುವ ಸಾದ್ಯತೆ ಕಡಿಮೆ. ಮುಖ್ಯವಾಗಿ ಭಾಷೆ. ಶಬ್ಧ ಜೋಡಣೆ, ಪ್ರಾಸ, ಅಲಂಕಾರಗಳು ವೃತ್ತಿ ನಿರತರಾಗಿದ್ದ ಕಾಲದಲ್ಲಿ ಲೀಲಾಜಾಲವಾಗಿ ಪ್ರವಹಿಸಿದ ಹಾಗೆ ಹೊರಬರಲಾರದು. ಆದರೆ ಲೇಖಕ ಶ್ರೀ ಕುಮಾರ್‌ರವರು ಕೆದಕಿ, ಬಾಯಿಗೆ ಕೈಹಾಕಿ ಎಮ್.ಎ ನಾಯ್ಕ್‌ರ ಹೃದಯಾಂತರಾಳದಲ್ಲಿ ಸುಪ್ತವಾಗಿದ್ದ ಸನ್ನಿವೇಶ ಹಾಗೂ ಶಬ್ಧಗಳಿಗೆ ಚಾಲನೆಕೊಡುವ ಮೂಲಕ ಈಗ ವಿಷಯ ಮಂಡನೆ ಮಾಡಿದಂತೆ ಭಾಸವಾಗುವ ರೀತಿಯಲ್ಲಿ ಸಂಗ್ರಹಿಸಿದ್ದಾರೆ. ಕೆಲವೊಂದು ಇಲ್ಲಿ ಉಲ್ಲೇಖನೀಯ.

ಪ್ರಶಸ್ತಿ ಪ್ರಕಾಶನ
ಕೋಟೇಶ್ವರ

ಬೆಲೆ : ರೂ. ೫೦/-